# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಮಾರ್ಚ್ 04, 2023

ಸಂಪುಟ : 49 ಸಂಚಿಕೆ : 291 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com



ತಪಸ್ ಮತ್ತು ಸಾಧನ ದಂತಹ ರಾಜ್ಯ ಪ್ರಖ್ಯಾತಿ ಪ್ರಕಲ್ಪಗಳನ್ನು ನಡೆಸುತ್ತಿರುವ
ರಾಷ್ಟ್ರೋತ್ಥಾನ ಪರಿಷತ್‌ನಿಂದ ಈಗ ದಾವಣಗೆರೆ ನಗರದಲ್ಲಿ

REGISTRATION OPEN
For I PUC 2023-24
Combination PCMB / PCMCs integrated training for
NEET / IIT JEE + K-CET + Board

RASHTROTTHANA COMPOSITE PU COLLEGE, DAVANAGERE
Ph: 08192-258255, Mob: 9480766501, 9964182067


## ತಳಸಮುದಾಯದ ವಿಶಿಷ್ಟ ಕಲೆಗಳಿಗೆ ಪುನರ್ಜೀವ

### 'ಮೂಲ ಸಂಸ್ಕೃತಿ, ಕನ್ನಡ ಸಂಸ್ಕೃತಿ' ಕಾರ್ಯಕ್ರಮದಲ್ಲಿ ರಾಜ್ಯ ಸಂಚಾಲಕ ಜಗದೀಶ್ ಹಿರೇಮನಿ




ದಾವಣಗೆರೆ, ಮಾ.3- ದೇಶದ ಮೂಲ ತಳಹದಿ ಜಾನಪದ ಸಂಸ್ಕೃತಿಯಲ್ಲಿದ್ದು, ನಶಿಸುತ್ತಿರುವ ತಳಸಮುದಾಯಗಳ ಜಾನಪದ ಕಲೆಗಳಿಗೆ ಪುನರ್ಜೀವನ ನೀಡುವ ಉದ್ದೇಶದಿಂದ ಯೋಜನೆ ಜಾರಿಗೊಳಿಸಲಾಗಿದೆ ಎಂದು ಮೂಲ ಸಂಸ್ಕೃತಿ-ಕನ್ನಡ ಸಂಸ್ಕೃತಿ ಯೋಜನೆಯ ರಾಜ್ಯ ಸಂಚಾಲಕ ಜಗದೀಶ್ ಹಿರೇಮನಿ ಹೇಳಿದರು.

ಶುಕ್ರವಾರ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಮೂಲ ಸಂಸ್ಕೃತಿ, ಕನ್ನಡ ಸಂಸ್ಕೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾವಿರಾರು ವರ್ಷಗಳ ಭಾರತದ ಇತಿಹಾಸದಲ್ಲಿ ಮೊದಲ ಸ್ಥಾನದಲ್ಲಿದದ್ದು ಜಾನಪದ ಸಂಸ್ಕೃತಿ. ಈ ಸಂಸ್ಕೃತಿಯ ಆಧಾರದ ಮೇಲೆ ಭಾರತೀಯರ ಜೀವನ ಪದ್ಧತಿ ನಡೆದು ಬಂದಿದೆ. ಕಾಲಕ್ರಮೇಣ ನಶಿಸಿ ಹೋಗುತ್ತಿರುವ ತಳಸಮುದಾಯಗಳ ವಿಶಿಷ್ಟ ಕಲೆ ಮತ್ತು ಕಲಾ ಪ್ರಕಾರಗಳ ಪುನರ್ಜೀವನ ಮಾಡುವುದಕ್ಕಾಗಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ರಾಜ್ಯದ 31 ಜಿಲ್ಲೆಗಳಲ್ಲಿ ನಶಿಸಿ ಹೋದ ಕಲೆಗಳನ್ನು ಹುಡುಕಿ, ಸಂಬಂಧಪಟ್ಟ ಕಲೆಗಳಿಗೆ ತರಬೇತಿ ನೀಡಲು ತರಬೇತುದಾರರ ನೇಮಿಸಿ ಪ್ರತಿ ಜಿಲ್ಲೆಯಲ್ಲೂ ಐದು ಪ್ರಕಾರದ ಕಲೆಗಳಿಗೆ 10 ವಿದ್ಯಾರ್ಥಿಗಳ ಒಂದು ತಂಡ ರಚನೆ ಮಾಡಿ ತರಬೇತಿ ನೀಡಲಾಗಿದೆ. ಒಟ್ಟು ರಾಜ್ಯದ 1800 ಜನ ನೂತನ ಶಿಬಿರಾರ್ಥಿಗಳಿಗೆ 350 ಜನ ಶಿಕ್ಷಕರಿಂದ ತರಬೇತಿ ಕೊಡಿಸಲಾಗಿದೆ ಎಂದು ತಿಳಿಸಿದರು.

ಪ್ರಮುಖವಾಗಿ ಮೂವತ್ತು ವರ್ಷದ ಒಳಗಿನ ಯುವಕರನ್ನ ಆಯ್ಕೆ ಮಾಡಿಕೊಂಡು ತರಬೇತಿ ನೀಡಲಾಗಿದೆ. 5 ತಂಡಗಳಲ್ಲಿ ಎರಡು ತಂಡಗಳಿಗೆ ರಾಜ್ಯಮಟ್ಟದ (4ನೇ ಪುಟಕ್ಕೆ)

## ಮಾಡಾಳ್ ಪುತ್ರನ ಬಳಿ ಸಿಕ್ಕಿದ್ದು 8.12 ಕೋ.ರೂ.

### ಅಗತ್ಯವಾದರೆ ಮಾಡಾಳ್ ವಿಚಾರಣೆ: ಲೋಕಾಯುಕ್ತ ಪಾಟೀಲ್

ಬೆಂಗಳೂರು, ಮಾ. 3 - ಲಂಚ ಸ್ವೀಕಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಅಗತ್ಯ ಬಿದ್ದರೆ ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ವಿಚಾರಣೆಗೊಳ ಪಡಿಸಲಾಗುವುದು ಎಂದು ಲೋಕಾಯುಕ್ತ ಬಿ.ಎಸ್.ಪಾಟೀಲ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರ ಪುತ್ರರಾಗಿರುವ ಜಲಮಂಡಳಿ ಲೆಕ್ಕಾಧಿಕಾರಿ ಪ್ರಶಾಂತ್ ಮಾಡಾಳ್ ಅವರ ಕಚೇರಿ ಮತ್ತು ನಿವಾಸದ ಮೇಲೆ ನಮ್ಮ ಪೊಲೀಸರು ದಾಳಿ ನಡೆಸಿ ಇದುವರೆಗೂ 8.12 ಕೋಟಿ ರೂ. ನಗದು ವಶಪಡಿಸಿಕೊಂಡಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ನಾವು ಇದುವರೆಗೂ 5 ಮಂದಿಯನ್ನು ವಶಕ್ಕೆ ಪಡೆದಿದ್ದು, ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುವುದು ಎಂದು ಪಾಟೀಲರು ವಿವರಣೆ ನೀಡಿದರು.

ಪ್ರಶಾಂತ್ ಅವರ ಖಾಸಗಿ ಕಚೇರಿಗೆ ಲಂಚ ನೀಡಲು ಬಂದಿದ್ದ ಮೂವರು ಆರೋಪಿಗಳು, ಆ ಸಂಸ್ಥೆಯ ಅಕೌಂಟೆಂಟ್ ಹಾಗೂ ಪ್ರಶಾಂತ್ ಮಾಡಾಳ್ ಸೇರಿದಂತೆ ಐದು ಆರೋಪಿಗಳ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಆರೋಪಿಗಳನ್ನು ಲೋಕಾಯುಕ್ತ ವಿಶೇಷ ನ್ಯಾಯಾಲಯದ ಮುಂದೆ ಹಾಜರು ಪಡಿಸಿ, ಮುಂದಿನ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ.

ಘಟನೆ ಕುರಿತಂತೆ ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಿದ್ದು, ಪ್ರಕರಣದಲ್ಲಿ ಯಾರ್ಯಾರು ಭಾಗಿಯಾಗಿದ್ದಾರೋ ಅವರೆಲ್ಲರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲಾಗುವುದು. ಕಾರ್ಯಾಚರಣೆ ನಡೆಸಿದ ವೇಳೆ ಟೆಂಡರ್‌ಗೆ ಸಂಬಂಧಪಟ್ಟಂತೆ ಲಂಚ ನೀಡಲು ಬಂದಿದ್ದ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಕಾನೂನಿನ ಪ್ರಕಾರ ಲಂಚ ನೀಡುವುದು ಕೂಡ ಅಪರಾಧವಾಗಿದೆ ಎಂದು ಅವರು ವಿವರಿಸಿದರು. (2ನೇ ಪುಟಕ್ಕೆ)

### ಮಾಡಾಳ್ ವಿರುದ್ಧ ಎಫ್‌ಐಆರ್, ಬಂಧನಕ್ಕಾಗಿ ಶೋಧ

**ಚನ್ನಗಿರಿ ಮನೆ ಮೇಲೂ ದಾಳಿ**

ಬೆಂಗಳೂರು, ಮಾ. 3-ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಚನ್ನಗಿರಿಯ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದಾರೆ. ಇದರ ಬೆನ್ನಲ್ಲೇ ಬೆಂಗಳೂರು ಹಾಗೂ ಚನ್ನಗಿರಿಯಲ್ಲಿರುವ ಅವರ ನಿವಾಸಗಳಲ್ಲಿ ಶೋಧ ಕಾರ್ಯ ನಡೆಸಿದ್ದಾರೆ.

ವಿರೂಪಾಕ್ಷಪ್ಪ ಅವರ ಕಚೇರಿ ಮೇಲೆ ನಿನ್ನೆ ಲೋಕಾಯುಕ್ತ ದಾಳಿ ನಡೆಸಿದಾಗ ಅವರ ಪುತ್ರ ಪ್ರಶಾಂತ್ ಕೋಟಿಗಟ್ಟಲೆ ಹಣದ ಸಮೇತ ಸಿಕ್ಕಿ ಬಿದ್ದಿದ್ದರು. ನಂತರ ಅವರನ್ನು ಬಂಧಿಸಿ, ಪ್ರಕರಣ ದಾಖಲಿಸಲಾಗಿದೆ. (2ನೇ ಪುಟಕ್ಕೆ)

### ಪ್ರಶಾಂತ್ 14 ದಿನ ಕಸ್ಟಡಿಗೆ

ಬೆಂಗಳೂರು, ಮಾ. 3 – ಲಂಚದ ಆರೋಪದ ಮೇಲೆ ಲೋಕಾಯುಕ್ತ ಪೊಲೀಸರು ಬಂಧಿಸಿರುವ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಮಾಡಾಳ್ ಹಾಗೂ ಇತರ ನಾಲ್ವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಶುಕ್ರವಾರ ಬೆಳಿಗ್ಗೆ ಲೋಕಾಯುಕ್ತ ಪೊಲೀಸರು ಪ್ರಶಾಂತ್ ಅವರ ನಿವಾಸ, ಬನಶಂಕರಿಯಲ್ಲಿರುವ ಕೆಎಸ್‌ಡಿಎಲ್ ಸಂಸ್ಥೆಯ ವ್ಯವಸ್ಥಾಪಕ (2ನೇ ಪುಟಕ್ಕೆ)

### ರಾಜೀನಾಮೆ ಅಂಗೀಕಾರ

ಬೆಂಗಳೂರು, ಮಾ. 3 - ಲೋಕಾಯುಕ್ತ ದಾಳಿಯಲ್ಲಿ ಖುದ್ದು ಪುತ್ರನೇ ಸಿಕ್ಕಿಬಿದ್ದಿರುವ ಹಿನ್ನೆಲೆಯಲ್ಲಿ ನೈತಿಕ ಹೊಣೆ ಹೊತ್ತು ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ (ಕೆಎಸ್‌ಡಿಎಲ್) ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ನಿನ್ನೆ ನಡೆದ ಲೋಕಾಯುಕ್ತ ದಾಳಿಗೂ ನನಗೂ ಸಂಬಂಧವಿಲ್ಲ. ಇದು ನನ್ನ ಕುಟುಂಬದ ವಿರುದ್ಧದ ಷಡ್ಯಂತ್ರ. ಆದರೂ ನನ್ನ ಮೇಲೆ (2ನೇ ಪುಟಕ್ಕೆ)

## ಚುನಾವಣೆ ಘೋಷಣೆಗಿಂತ ಮುಂಚೆಯೇ ಹಣದ ಆಮಿಷ

**ಹಣದ ವಹಿವಾಟಿನ ಮೇಲೆ ರಾಷ್ಟ್ರೀಯ ತನಿಖಾ ಸಂಸ್ಥೆಗಳ ನಿಗಾ**

ಬೆಂಗಳೂರು, ಮಾ. 3 - ವಿಧಾನಸಭೆಯ ಚುನಾವಣೆಗೂ ಮುನ್ನ ಸ್ಪರ್ಧಾಕಾಂಕ್ಷಿಗಳು ಮತದಾರರಿಗೆ ನಾನಾ ರೀತಿಯ ಆಮಿಷವೊಡ್ಡುತ್ತಿರುವ ಆರೋಪ ವ್ಯಾಪಕವಾಗಿರುವ ಹಿನ್ನೆಲೆಯಲ್ಲಿ ಹಣದ ವಹಿವಾಟಿನ ಮೇಲೆ ನಿಗಾ ಇಡಲು ರಾಷ್ಟ್ರಮಟ್ಟದ ತನಿಖಾ ಸಂಸ್ಥೆಗಳ ಅಧಿಕಾರಿಗಳು ರಾಜ್ಯದಲ್ಲಿ ಈಗಾಗಲೇ ಬೀಡು ಬಿಟ್ಟಿದ್ದಾರೆ.

ಸ್ಪರ್ಧಾಕಾಂಕ್ಷಿಗಳಿಗೆ ಈಗಾಗಲೇ ದಾಳಿ ಮಾಡುವ ಗುಮ್ಮ (2ನೇ ಪುಟಕ್ಕೆ)

## ಕೃಷಿ ವಲಯಕ್ಕೆ ಶೇ.50 ಕ್ಕೂ ಹೆಚ್ಚು ಅವಕಾಶ ನೀಡಿ : ಡಾ. ಸಿದ್ಧನಗೌಡ



ಹರಪನಹಳ್ಳಿ, ಮಾ.3 - ಕೃಷಿಕರಲ್ಲಿಯೇ ಕೃಷಿ ಭೂಮಿ ಉಳಿಸುವ ಕಾರ್ಯ ಇರುವುದಿಲ್ಲ. ಹೆಚ್ಚು ಆದಾಯ ಹೊಂದಿರುವವರು ಕೂಷಿ ಭೂಮಿ ಖರೀದಿಸುವಂತಿರಲಿಲ್ಲ, ಕೃಷಿ ಭೂಮಿ ಯನ್ನು ಉದ್ಯಮಗಳ ಮೇಲೆ ವಿನಿಯೋಗಿಸಲಾಗುತ್ತಿದೆ ಎಂದ ಅವರು ಸೇವಾವಲಯಕ್ಕೆ ಶೇ.56 ರಷ್ಟು, ಉತ್ಪಾದನಾ ವಲಯ ಕಡಿಮೆಯಾಗಿದೆ, ಕೃಷಿ ವಲಯ ಶೇ.13 ಕ್ಕೆ ಇಳಿದಿದೆ ಆದ್ದರಿಂದ ಕೃಷಿ ವಲಯಕ್ಕೆ ಶೇ.50 ಕ್ಕೂ ಹೆಚ್ಚು ಅವಕಾಶವನ್ನು ನೀಡಬೇಕು ಎಂದು (2ನೇ ಪುಟಕ್ಕೆ)

**ಪರ್ಯಾಯ ಕೃಷಿ ಹೆಸರಿನಲ್ಲಿ ರೈತರ ಭೂಮಿಯ ಮೇಲೆ ಪ್ರಯೋಗಕ್ಕೆ ಮುಂದಾಗಿದ್ದಾರೆ. ಆದರೆ ಸಣ್ಣ ರೈತರು ಪ್ರಯೋಗದಿಂದ ಸಂಕಷ್ಟಕ್ಕೀಡಾಗಿದ್ದು, ಬದಲಾಗಿ ಕೃಷಿ ವಿ.ವಿ.ಗಳಲ್ಲಿ ಮೊದಲು ಪ್ರಯೋಗ ಮಾಡಲಿ ಎಂದು ಪ್ರಶ್ನಿಸಿದ ಅವರು, ಕೃಷಿ ಬಿಕ್ಕಟ್ಟಿನಿಂದ ದೇಶವನ್ನು ಪಾರು ಮಾಡುವ ನಿಟ್ಟಿನಲ್ಲಿ ಪರ್ಯಾಯ ಕೃಷಿ ಧೋರಣೆಗಳಿಗಾಗಿ ರೈತ ಚಳವಳಿಗಳನ್ನು ಬಲಪಡಿಸುವ ಅಗತ್ಯವಿದೆ.**

## ಶಾಲೆಗಳ ನಿರಾಪೇಕ್ಷಣ ಪತ್ರ ಪ್ರಕ್ರಿಯೆ ಸರಳೀಕರಣ

ಬೆಂಗಳೂರು, ಮಾ.3 - ಶಿಕ್ಷಣ ಇಲಾಖೆ ಮತ್ತು ಸಾಕ್ಷರತಾ ಇಲಾಖೆ ರಾಜ್ಯದಲ್ಲಿ ಖಾಸಗಿ ಪೂರ್ವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ಆರಂಭಿಸಲು ಅನುಮತಿ ನೋಂದಣಿ ಪ್ರಥಮ ಹಾಗೂ ಕೇಂದ್ರ ಪಠ್ಯಕ್ರಮ ಸಂಯೋಜನೆಗೆ ನಿರಾಪೇಕ್ಷಣ ಪತ್ರ ಪಡೆಯುವ ಸೇವೆಗಳ ಕುರಿತಂತೆ ಆನ್‌ಲೈನ್ ಪ್ರಕ್ರಿಯಗಳನ್ನು ಪರಿಷ್ಕರಿಸಿ ಸರಳೀಕರಣಗೊಳಿಸಲಾಗು ವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ನಾಗೇಶ್ ತಿಳಿಸಿದರು. ಹೊಸ ಪದ್ಧತಿಯಲ್ಲಿ ಹೆಚ್ಚು ಪಾರದರ್ಶಕತೆಯೊಂದಿಗೆ ಅಲ್ಪ ಸಮಯದಲ್ಲಿ ಶಾಲಾ ನೋಂದಣಿ ಹಾಗೂ ಮತ್ತಿತರ ಸೇವೆಗಳನ್ನು ಆನ್‌ಲೈನ್‌ನಲ್ಲಿ ಇಲಾಖೆಯು ಒದಗಿಸಲಿದ್ದು, ಮಾರ್ಚ್ ಮೂರರಂದು ಪರಿಷ್ಕೃತ (4ನೇ ಪುಟಕ್ಕೆ)

## ಹಿಜಾಬ್ : ವಿಚಾರಣೆಗೆ ಸುಪ್ರೀಂ ಸಮ್ಮತಿ

ನವದೆಹಲಿ, ಮಾ. 3 – ಕರ್ನಾಟಕದಲ್ಲಿ ಪರೀಕ್ಷೆಯ ವೇಳೆ ಹಿಜಾಬ್ ಧರಿಸಲು ಅನುಮತಿ ನೀಡಬೇಕು ಎಂಬ ಅರ್ಜಿಯ ವಿಚಾರಣೆಗೆ ಪೀಠ ರಚಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ. ಪರ್ಡಿವಾಲಾ ಅವರನ್ನು ಒಳಗೊಂಡ ಪೀಠದ ಎದುರು ಮುಸ್ಲಿಂ ವಿದ್ಯಾರ್ಥಿಗಳು ಹಿಜಾಬ್ ಅನುಮತಿಗೆ ಅರ್ಜಿ ದಾಖಲಿಸಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಹಿಜಾಬ್‌ಗೆ ಅನುಮತಿ ಇಲ್ಲ. ಹೀಗಾಗಿ ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗದೇ ಹೋದರೆ ಮತ್ತೊಂದು ವರ್ಷ ಕಳೆದುಕೊಳ್ಳಲಿದ್ದಾರೆ ಎಂದು ವಿದ್ಯಾರ್ಥಿನಿಯರ ಪರ ವಕೀಲರಾದ ಶದನ್ ಫರಸತ್ ವಾದ ಮಂಡಿಸಿದ್ದರು.

## ಕೆಮ್ಮಿನ ಔಷಧದಿಂದ ಮಕ್ಕಳ ಸಾವು : ಬಂಧನ


ನೊಯ್ಡಾ, ಮಾ. 3 – ಕಳೆದ ವರ್ಷ ಉಜ್ಬೇಕಿಸ್ತಾನದಲ್ಲಿ 18 ಮಕ್ಕಳ ಸಾವಿಗೆ ಕಾರಣವಾದ ಕೆಮ್ಮಿನ ಔಷಧದ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ ಔಷಧ ಕಂಪನಿಯೊಂದರ ಮೂವರು ಉದ್ಯೋಗಿಗಳನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾರಿಯಾನ್ ಬಯೋಟೆಕ್ ಕಂಪನಿಯ ಇಬ್ಬರು ನಿರ್ದೇಶಕರೂ ಸೇರಿದಂತೆ ಐವರ ವಿರುದ್ಧ ಗುರುವಾರ ರಾತ್ರಿ ಎಫ್.ಐ.ಆರ್. ದಾಖಲಿಸಲಾಗಿದೆ. ಔಷಧ ನಿಯಂತ್ರಕ ಸಿ.ಡಿ.ಎಸ್.ಸಿ.ಒ. ಸೂಚನೆಯ ಅನ್ವಯ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಉತ್ತರ ಪ್ರದೇಶದ ಔಷಧ ಅಧಿಕಾರಿಗಳು ಮಾರಿಯಾನ್ ಬಯೋಟೆಕ್ ಕಂಪನಿಯ ಮಾದರಿಗಳನ್ನು ಪರೀಕ್ಷಿಸಿದ್ದರು. ಆಗ 22 ಗುಣಮಟ್ಟ ಮಾನದಂಡಕ್ಕೆ ಅನುಗುಣವಾಗಿಲ್ಲ ಎಂಬುದು ಪತ್ತೆಯಾಗಿದೆ.

## 12ರಂದು ಹೊನ್ನಾಳಿಗೆ ಅಮಿತ್ ಷಾ, ಬೊಮ್ಮಾಯಿ

### ಸಮಾರಂಭದಲ್ಲಿ 12 ಜಿಲ್ಲೆಗಳ 53 ಸಾವಿರ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ



ಹೊನ್ನಾಳಿ, ಮಾ.3- ಇದೇ ದಿನಾಂಕ 12 ರ ಭಾನುವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹತ್ತಕ್ಕೂ ಹೆಚ್ಚು ಸಚಿವರು ಹೊನ್ನಾಳಿಗೆ ಭೇಟಿ ನೀಡಲಿದ್ದು, ನ್ಯಾಮತಿ ರಸ್ತೆಯಲ್ಲಿನ ಅರಬಗಟ್ಟೆ ವಸತಿ ಶಾಲೆಯ ಸಮೀಪದಲ್ಲಿ ಸಿದ್ದಪಡಿಸಲಿರುವ ಬೃಹತ್ ವೇದಿಕೆ ಕಾರ್ಯಕ್ರಮದಲ್ಲಿ ಸುಮಾರು 53 ಸಾವಿರ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಮಾಡಲಿದ್ದಾರೆ ಎಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಶುಕ್ರವಾರ ಅರಬಗಟ್ಟೆ ವಸತಿ ಶಾಲೆ ಸಮೀಪದ ಪ್ರದೇಶಕ್ಕೆ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ಇಂದು ಭೇಟಿ ನೀಡಿ ಕಾರ್ಯಕ್ರಮ ನಡೆಯುವ ಸ್ಥಳ ಪರಿಶೀಲಿಸಿದ ಸಂದರ್ಭದಲ್ಲಿ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ಚಿತ್ರದುರ್ಗ, ಬಳ್ಳಾರಿ, ವಿಜಯನಗರ, ಗದಗ, ಧಾರವಾಡ, ಕೊಪ್ಪಳ, ಹಾವೇರಿ, ದಾವಣಗೆರೆ, ಶಿವಮೊಗ್ಗ, ಹಾಸನ ಸೇರಿದಂತೆ 12 ಜಿಲ್ಲೆಗಳಿಂದ 53 ಸಾವಿರ ಫಲಾನುಭವಿಗಳು ಈ ಕಾರ್ಯಕ್ರಮಕ್ಕೆ ಬರಲಿದ್ದಾರೆ ಎಂದು ಹೇಳಿದ ರೇಣುಕಾಚಾರ್ಯ, ತಾಂಡ ಗಳು, ಹಟ್ಟಿಗಳು, ಹೊಸಕ್ಯಾಂಪ್‌ನಲ್ಲಿ ವಾಸಿಸುತ್ತಿರುವ ಪ್ರದೇಶಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಿ ಅವರಿಗೆ ಹಕ್ಕುಪತ್ರಗಳನ್ನು ನೀಡುವ ಕಾರ್ಯಕ್ರಮ ಅದ್ಧೂರಿಯಾಗಿ ನಡೆಯಲಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ಗುಲ್ಬರ್ಗದಲ್ಲಿ ನಡೆದ ಕಾರ್ಯಕ್ರಮದಲ್ಲಿ 50 ಸಾವಿರ ಜನರಿಗೆ ಹಕ್ಕುಪತ್ರ ವಿತರಿಸಿದರು. ಮೋದಿಯವರನ್ನು ಕರೆಸಿ ಹೊನ್ನಾಳಿಯಲ್ಲಿಯೇ ಆಯೋಜನೆ ಮಾಡಬೇಕೆಂಬ ನನ್ನ ಆಸೆ ಈಡೇರಲಿಲ್ಲ. ಅದನ್ನು ನನ್ನ ಸ್ನೇಹಿತ ರಾಜೂಗೌಡ ಕಿತ್ತುಕೊಂಡ. ಹೀಗಾಗಿ ಹೊನ್ನಾಳಿಗೆ ಅಮಿತ್ ಶಾ ಅವರನ್ನು ಕರೆಸಲಾಗುತ್ತಿದ್ದು, ಇದು ಎರಡನೇ ಅತಿದೊಡ್ಡ ಕಾರ್ಯಕ್ರಮವಾಗಲಿದ್ದು, ಗಿನ್ನೀಸ್ ದಾಖಲೆಯಾಗಲಿದೆ ಎಂದರು.

**ಜಿಲ್ಲಾಧಿಕಾರಿ, ಎಸ್ಪಿಯೊಂದಿಗೆ ಚರ್ಚೆ :** ಸುಮಾರು 1.50 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಜನ ಸೇರುವ ನಿರೀಕ್ಷೆ ಇದ್ದು, ಅದಕ್ಕಾಗಿ ಟ್ರಾಫಿಕ್ ವ್ಯವಸ್ಥೆ ಕುರಿತು ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಚರ್ಚೆ ನಡೆಸಿದ ರೇಣುಕಾಚಾರ್ಯ, ಅದಕ್ಕಾಗಿ ಅರಬಗಟ್ಟೆ ವಸತಿ ಶಾಲೆಗೆ ಹೊಂದಿಕೊಂಡಂತೆ (2ನೇ ಪುಟಕ್ಕೆ)

### 1800 ಕೋಟಿ ವೆಚ್ಚದ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ



**ಹೊನ್ನಾಳಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 1800 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಮಾಜಿ ಮುಖ್ಯಮಂತ್ರಿಗಳು ಇತರ ಸಚಿವರು ನೆರವೇರಿಸಿಕೊಡಲಿದ್ದಾರೆ.**

**- ಎಂ.ಪಿ. ರೇಣುಕಾಚಾರ್ಯ, ಶಾಸಕ**

## ಶಾಸಕರ ವಿರುದ್ಧ ಕ್ರಮಕ್ಕೆ ಜಿಲ್ಲಾ ಕಾಂಗ್ರೆಸ್ ಆಗ್ರಹ

### ಭ್ರಷ್ಟಾಚಾರ ಪ್ರಕರಣ ಸಿಐಡಿಗೆ ವಹಿಸಲು ಆಗ್ರಹಿಸಿ ಕಾರ್ಯಕರ್ತರ ಪ್ರತಿಭಟನೆ



ದಾವಣಗೆರೆ, ಮಾ. 3- ಕೋಟಿ ಲಂಚ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಚನ್ನಗಿರಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಸೇರಿದಂತೆ ಬಿಜೆಪಿಯ ಎಲ್ಲಾ ಸಚಿವರು, ಶಾಸಕರು ಮಾಡಿರುವ ಅಕ್ರಮಗಳ ವಿರುದ್ಧ ಸಿಐಡಿ ತನಿಖೆ ನಡೆಸುವಂತೆ ಆಗ್ರಹಿಸಿ ನಗರದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು, ಪದಾಧಿಕಾರಿಗಳು ಜಯದೇವ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ಇದೇ ವೇಳೆ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಜಿ.ಶಿವಕುಮಾರ್ ಮಾತನಾಡಿ, ಬಿಜೆಪಿಯ ದುರಾಡಳಿತವನ್ನು ಕಾಂಗ್ರೆಸ್ ವರಿಷ್ಠರು ಸಾಕ್ಷಿ ಸಮೇತ ಹೇಳಿದರೂ ಸಹ ಮುಖ್ಯಮಂತ್ರಿ, ಬೊಮ್ಮಾಯಿ, ಸರಿಯಾದ ಸಾಕ್ಷಿ ಇಲ್ಲ ಎಂದು ಹಾರಿಕೆ ಉತ್ತರ ನೀಡಿದ್ದರು. ಇದೀಗ ಎಲ್ಲವೂ ಬಟಾಬಯಲಾಗಿದೆ ಎಂದರು.

ನಿಗಮವೊಂದರ ಅಧ್ಯಕ್ಷರಾಗಿದ್ದ ಮಾಡಾಳು ವಿರುಪಾಕ್ಷಪ್ಪ ಅವರ ಪುತ್ರನ ಕಚೇರಿಯಲ್ಲಿ 40 ಲಕ್ಷ ರೂ.ಗಳ ಸಮೇತ ಬಂಧಿಸಿದ್ದಾರೆ. ಕಾರಣ ಮುಖ್ಯಮಂತ್ರಿಗಳು ಲೋಕಾಯುಕ್ತ ಅಧಿಕಾರಿಗಳು ಬಂಧಿಸಿರುವ ದಾಖಲೆಗಳು ಸಾಕಲ್ಲವೇ, ಕಾರಣ ಈ ಕೂಡಲೇ ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕು. ಆ ಮೂಲಕ ಇಡೀ ಸಚಿವ ಸಂಪುಟವನ್ನೇ ವಜಾ ಮಾಡಬೇಕು. ಅಲ್ಲದೇ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತ ಬರಬೇಕಿದೆ ಎಂದು ಹೇಳಿದರು.

ಪಾಲಿಕೆ ಸದಸ್ಯ ಎ. ನಾಗರಾಜ್ ಮಾತನಾಡಿ, ಲೋಕಾಯುಕ್ತ ದಾಳಿಯಲ್ಲಿ 40 ಲಕ್ಷ ರೂ. ಲಂಚ ಸ್ವೀಕರಿಸುವಾಗ ಸಿಕ್ಕಿ ಹಾಕಿಕೊಂಡಿರುವ ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಹಾಗೂ ಕಚೇರಿಯಲ್ಲಿ ದೊರೆತ 1.62 ಕೋಟಿ, ಮನೆಯಲ್ಲಿ ಸುಮಾರು 6 ಕೋಟಿ ದೊರೆತಿದೆ. ಮುಖ್ಯಮಂತ್ರಿಗಳಿಗೆ ಇದಕ್ಕಿಂತ ಸಾಕ್ಷಿ ಬೇಕೇ, ಈ ಪ್ರಕರಣದಲ್ಲಿ ಶಾಸಕರನ್ನು ಸಹ ಬಂಧಿಸಬೇಕೆಂದು ಆಗ್ರಹಿಸಿದರು.

ಪಾಲಿಕೆ ವಿಪಕ್ಷದ ನಾಯಕ ಮಂಜುನಾಥ್ ಗಡಿಗುಡಾಳು ಮಾತನಾಡಿ, ಕಾಂಗ್ರೆಸ್ ಪಕ್ಷ ಬಿಜೆಪಿಯವರನ್ನು ವಿರೋಧಿಸಿದರೆ ನಮ್ಮನ್ನು ದೇಶದ್ರೋಹಿಗಳೆಂದು ಬಿಂಬಿಸುತ್ತಾರೆ. ಇದೀಗ ಬಿಜೆಪಿಯವರ ಭ್ರಷ್ಟಾಚಾರ ಬಯಲಿಗೆ ಬಂದಿದೆ. ಕೇವಲ ಇವರೊಬ್ಬರೇ ಮಾತ್ರವಲ್ಲ. ಬಿಜೆಪಿಯ ಎಲ್ಲಾ (4ನೇ ಪುಟಕ್ಕೆ)

# 9 ರಿಂದ ದ್ವಿತೀಯ ಪಿಯುಸಿ ಪರೀಕ್ಷೆ: ಪಾರದರ್ಶಕ ಪರೀಕ್ಷೆಗೆ ಸೂಚನೆ



**ಜಿಲ್ಲೆಯಲ್ಲಿ 31 ಪರೀಕ್ಷಾ ಕೇಂದ್ರ -20445 ವಿದ್ಯಾರ್ಥಿಗಳು ನೊಂದಣಿ**

ದಾವಣಗೆರೆ, ಮಾ. 3 - ಇದೇ ದಿನಾಂಕ 9 ರಿಂದ 29 ರವರೆಗೆ ನಡೆಯುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸಬೇಕು ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ ಕಚೇರಿಯಲ್ಲಿ ನಿನ್ನೆ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಿ, ಮಾತನಾಡಿದ ಅವರು, ಪದವಿ ಪೂರ್ವ ಶಿಕ್ಷಣ ಮಂಡಳಿಯ ಮಾರ್ಗ ಸೂಚಿಯಂತೆ ಕಟ್ಟುನಿಟ್ಟಾಗಿ ಪರೀಕ್ಷೆ ನಡೆಸಬೇಕು. ಪರೀಕ್ಷೆ ನಿಯೋಜಿತ ಅಧಿಕಾರಿಗಳು ಸಮಯ ಪಾಲನೆ ಹಾಗೂ ಶಿಸ್ತಿನಿಂದ ಕಾರ್ಯನಿರ್ವಹಿಸುವಂತೆ ಸಲಹೆ ನೀಡಿದರು.

ಕಾಲಕಾಲಕ್ಕೆ ಪರೀಕ್ಷಾ ದಿನಗಳಲ್ಲಿ ಸಂಬಂಧಿಸಿದ ಖಜಾನೆಗಳಿಂದ ಪ್ರಶ್ನೆ ಪತ್ರಿಕೆ ಹಾಗೂ ಪರೀಕ್ಷಾ ಕೇಂದ್ರಗಳಿಗೆ ವಿತರಣೆ ಕುರಿತು ಹೆಚ್ಚಿನ ಜವಾಬ್ದಾರಿ ವಹಿಸಕೊಳ್ಳಬೇಕು. ಖಜಾನೆ ಅಧಿಕಾರಿಗಳು, ತಹಶೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ಸೂಚನೆ ನೀಡಿದರು.

**ನಿಷೇಧ:** ಪರೀಕ್ಷಾ ಕೇಂದ್ರಗಳ ಒಳಗೆ ವಿದ್ಯಾರ್ಥಿಗಳು ಕೊಠಡಿ ಮೇಲ್ವಿಚಾರ ಸಿಬ್ಬಂದಿಗಳು ಮೊಬೈಲ್ ಫೋನ್/ಇತರೆ ವಿದ್ಯುನ್ಮಾನ ಆಧುನಿಕ ಉಪಕರಣಗಳ ಬಳಕೆ ನಿಷೇಧಿಸಿದೆ. ಕೊಠಡಿ ಒಳಗೆ ಯಾರೂ ವಿದ್ಯುನ್ಮಾನ ಉಪಕರಣಗಳನ್ನು ತಗೆದುಕೊಂಡು ಹೋಗುವಂತಿಲ್ಲ ಹಾಗೂ ಪರೀಕ್ಷಾ ಕೇಂದ್ರ ಆವರಣದಲ್ಲಿ ಅನಾವಶ್ಯಕ ಓಡಾಟ ಪರೀಕ್ಷೆ ಕಾರ್ಯಕ್ಕೆ ಸಂಬಂಧಿಸದೆ ಇರುವ ವ್ಯಕ್ತಿಗಳ ಪ್ರವೇಶಕ್ಕೆ ನಿಷೇಧವಿದೆ ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಿಸುವಂತೆ ಸೂಚನೆ ನೀಡಿದರು. ಹಾಗೂ ಪರೀಕ್ಷ ಕೇಂದ್ರ ಸುತ್ತಲು ಸೆಕ್ಷನ್ 144 ರನ್ವಯ ನಿಷೇಧಾಜ್ಞೆ ಘೋಷಿಸಲಾಗುವುದು. ಎಂದರು.

ಯಾವ ವಿಷಯದ ಪರೀಕ್ಷೆ ನಡೆಯುತ್ತಿದೆಯೋ ಆ ದಿನದಂದು ಅದೇ ವಿಷಯಕ್ಕೆ ಸಂಬಂಧಿಸಿದ ಉಪನ್ಯಾಸಕರನ್ನು ಕೊಠಡಿ ಮೇಲ್ವಿಚಾರಕರನ್ನಾಗಿ ನೇಮಕಾತಿ ಮಾಡಿಕೊಳ್ಳಬಾರದು ಹಾಗೂ ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧಿಕ್ಷಕರು, ಪರೀಕ್ಷಾರ್ಥಿಗಳನ್ನು ಪೀಠೋಪಕರಣ ಇನ್ನಿತರ ಯಾವುದೇ ಸಮಸ್ಯೆಗಳಿದ್ದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲೆಗಳಿಂದ ನೆರವು ಪಡೆದುಕೊಳ್ಳಲು ಸೂಚಿಸಿದರು.

**ಪರೀಕ್ಷಾ ಕೇಂದ್ರ:** ಜಿಲ್ಲೆಯ ದಾವಣಗೆರೆ ತಾಲ್ಲೂಕಿನಲ್ಲಿ 17, ಹರಿಹರ ತಾಲ್ಲೂಕಿನಲ್ಲಿ 4, ಜಗಳೂರು ತಾಲ್ಲೂಕಿನಲ್ಲಿ 3, ಚನ್ನಗಿರಿ ತಾಲ್ಲೂಕಿನಲ್ಲಿ 4, ಹೊನ್ನಾಳಿ ತಾಲ್ಲೂಕಿನಲ್ಲಿ 3 ಕೇಂದ್ರಗಳು ಒಳಗೊಂಡಂತೆ ಒಟ್ಟಾರೆ 31 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ.

20445 ವಿದ್ಯಾರ್ಥಿಗಳು ನೊಂದಣಿ 17928 ಹೊಸ ವಿದ್ಯಾರ್ಥಿಗಳು, 2159 ಪುನರಾವರ್ತಿತ ವಿದ್ಯಾರ್ಥಿಗಳು, 358 ಖಾಸಗೀ ವಿದ್ಯಾರ್ಥಿಗಳು ಒಳಗೊಂಡಂತೆ ಒಟ್ಟಾರೆಯಾಗಿ ಜಿಲ್ಲೆಯ 20445 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ನೊಂದಾಯಿಸಿಕೊಂಡಿದ್ದಾರೆ.

**ವೀಕ್ಷಕರ ನೇಮಕ:** ಪಾರದರ್ಶಕ ಪರೀಕ್ಷೆ ನಡೆಸುವ ನಿಟ್ಟಿನಲ್ಲಿ ವಿವಿಧ ಇಲಾಖೆಯ ಅಧಿಕಾರಿ ಗಳನ್ನು ನಿಯೋಜಿಸಲಾಗುವುದು. ಖಜಾನೆಯಿಂದ ಪ್ರಶ್ನೆ ಪತ್ರಿಕೆ ರವಾನಿಸುವ ವಾಹನಗಳಿಗೆ ಜಿಪಿಎಸ್ ಅಳವಡಿಸಲಾಗುವುದು.ಕುಡಿಯುವ ನೀರಿನ ವ್ಯವಸ್ಥೆ, ಆಯಾಯ ಪರೀಕ್ಷಾ ಕೊಠಡಿ ಒಳಗೆ ವ್ಯವಸ್ಥೆ ಮಾಡು ವುದು, ವಿದ್ಯಾರ್ಥಿಗಳು, ಸಿಬ್ಬಂದಿಗಳು ಪ್ರವೇಶ ಪತ್ರ ಮತ್ತು ಗುರುತಿನ ಚೀಟಿ ಹಾಗೂ ಕಾಲೇಜುಗಳಲ್ಲಿ ನಿಗದಿ ಪಡಿಸಿದ ಸಮವಸ್ತ್ರಧರಿಸಿ ಹಾಜರಾಗುವುದು. ಪರೀಕ್ಷಾರ್ಥಿಗಳಿಗೆ ಕಡ್ಡಾಯವಾಗಿ ಪೀಠೋಪರಕಣ ವ್ಯವಸ್ಥೆ ಮಾಡಲು ಸೂಚಿಸಿದರು.

ಸಭೆಯಲ್ಲಿ ಹೆಚ್ಚುವರಿ ಪೋಲೀಸ್ ವರಿಷ್ಠಾಧಿಕಾರಿ ಬಸವರಾಜ ಬಸರಗಿ, ಜಿಲ್ಲಾ ಖಜಾನೆ ಉಪನಿರ್ದೇಶಕಿ ಪ್ರಭಾವತಿ, ಡಿಡಿಪಿಐ ತಿಪ್ಪೇಶಪ್ಪ, ಡಿ.ಡಿ.ಪಿ.ಯು ಎಂ. ಶಿವರಾಜ್ ಹಾಗೂ ಜಿಲ್ಲಾ ಮತ್ತು ತಹಶೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ವಿಶೇಷ ಪ್ರಶ್ನೆ ಪತ್ರಿಕೆ ಪಾಲಕರು ಉಪಸ್ಥಿತರಿದ್ದರು.

# ಹಳೆ ಪಿಂಚಣಿ : ನೌಕರರಿಗೆ ಸೌಲಭ್ಯ, ಜನರಿಗೆ ಸಂಕಷ್ಟ

ನವದೆಹಲಿ, ಮಾ. 3 – ಕೆಲ ರಾಜ್ಯಗಳು ಹಳೆಯ ಪಿಂಚಣಿ ಪದ್ಧತಿ ಜಾರಿಗೆ ತರುತ್ತಿರುವುದು ಪ್ರತಿಗಾಮಿ ಕ್ರಮ. ಇದರಿಂದ ಸರ್ಕಾರಿ ನೌಕರರಿಗೆ ಸೌಲಭ್ಯ ನೀಡಲು ಜನರಿಗೆ ಸಂಕಷ್ಟ ತಂದಂತಾಗುತ್ತದೆ. ಸಮಾಜದ ಬಹಳಷ್ಟು ಜನರಿಗೆ ಸಾಮಾಜಿಕ ಸುರಕ್ಷತೆ ಇಲ್ಲ ಎಂದು ರಿಸರ್ವ್ ಬ್ಯಾಂಕ್ ಮಾಜಿ ಗವರ್ನರ್ ಡಿ. ಸುಬ್ಬರಾವ್ ಹೇಳಿದ್ದಾರೆ.

ಹಳೆಯ ಪಿಂಚಣಿ ಪದ್ಧತಿಯಲ್ಲಿ ಉದ್ಯೋಗಿಗಳು ತಮ್ಮ ಕೊನೆಯ ವೇತನ ಅರ್ಧದಷ್ಟನ್ನು ಪಿಂಚಣಿಯಾಗಿ ಪಡೆಯುತ್ತಾರೆ. ಏಪ್ರಿಲ್ 1, 2004ರಿಂದ ಹಳೆಯ ಪಿಂಚಣಿ ಪದ್ಧತಿಯನ್ನು ನಿಲ್ಲಿಸಲಾಗಿತ್ತು.

ಹಣಕಾಸು ಜವಾಬ್ದಾರಿ ಹಾಗೂ ಸುಧಾರಣೆಗಳ ನಂಬಿಕಾರ್ಹತೆಯ ವಿಷಯದಲ್ಲಿ ಹಳೆ ಪಿಂಚಣಿ ಪ್ರತಿಗಾಮಿ ಕ್ರಮವಾಗಲಿದೆ ಎಂದು ಸುಬ್ಬರಾವ್ ತಿಳಿಸಿದ್ದಾರೆ.

ದೇಶದ ಬಹುತೇಕ ಜನರಿಗೆ ಸಾಮಾಜಿಕ ಸುರಕ್ಷತೆ ಇಲ್ಲ. ಸರ್ಕಾರಿ ನೌಕರರಿಗೆ ನಿಶ್ಚಿತ ಠೇವಣಿ ನೀಡುವುದು ಅತಿಯಾದ ಕ್ರಮ. ಈ ಸೌಲಭ್ಯದಿಂದ ಸಾರ್ವಜನಿಕರಿಗೆ ಹೊರೆಯಾಗುತ್ತದೆ. ಇದು ನೈತಿಕವಾಗಿಯೂ ತಪ್ಪು ಹಾಗೂ ಆರ್ಥಿಕವಾಗಿ ಧಕ್ಕೆ ತರುತ್ತದೆ ಎಂದವರು ಹೇಳಿದ್ದಾರೆ.

ರಾಜ್ಯ ಸರ್ಕಾರಗಳು ಹೊಸ ಪಿಂಚಣಿ ಯೋಜನೆಯನ್ನು ಕೈ ಬಿಟ್ಟರೆ, ಪಿಂಚಣಿಯ ಹೊರೆ ನಿಭಾಯಿಸಲು ಶಾಲೆ, ಆಸ್ಪತ್ರೆ, ರಸ್ತೆ ಹಾಗೂ ಕೃಷಿ ಮುಂತಾದ ಯೋಜನೆಗಳಿಗೆ ನೀಡುವ ಹಣಕ್ಕೆ ಕೊರತೆಯಾಗುತ್ತದೆ ಎಂದವರು ಹೇಳಿದರು.

ಹಳೆಯ ಪಿಂಚಣಿ ಯೋಜನೆ ಜಾರಿಗೆ ತರುವುದಾಗಿ ರಾಜಸ್ಥಾನ, ಛತ್ತೀಸ್‌ಘಡ ಹಾಗೂ ಜಾರ್ಖಂಡ್ ರಾಜ್ಯಗಳು ಕೇಂದ್ರ ಸರ್ಕಾರ ಹಾಗೂ ಪಿಂಚಣಿ ನಿಧಿ ನಿಯಂತ್ರಣ ಪ್ರಾಧಿಕಾರಗಳಿಗೆ ತಿಳಿಸಿವೆ.

## ಹೊನ್ನಾಳಿಗೆ ಷಾ, ಬೊಮ್ಮಾಯಿ, ಯಡಿಯೂರಪ್ಪ



(1ನೇ ಪುಟದಿಂದ) ಇರುವ ವಿಶಾಲವಾದ ಜಮೀನಿನಲ್ಲಿ ಬೃಹತ್ ಪೆಂಡಾಲ್‌ಗಳನ್ನು ಹಾಕಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಎಸ್‌ಪಿ. ಸಿ.ಬಿ. ರಿಷ್ಯಂತ್ ಅವರು ಪತ್ರಿಕೆಯೊಂದಿಗೆ ಮಾತನಾಡಿ, ರಾಜ್ಯದ 12 ಜಿಲ್ಲೆಗಳಿಂದ ಬರುವ ಜನಸಂಖ್ಯೆಯನ್ನು ಆಧರಿಸಿ ಟ್ರಾಫಿಕ್ ವ್ಯವಸ್ಥೆ, ಪಾರ್ಕಿಂಗ್ ವ್ಯವಸ್ಥೆ, ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಹಾಗೂ ಖಾಸಗಿ ಬಸ್ ಮಾಲೀಕರ ಜೊತೆ ಸಭೆ, ಬ್ಯಾರಿಕೇಡ್ ವ್ಯವಸ್ಥೆ, ಮ್ಯಾಪಿಂಗ್ ಪ್ಲಾನ್ ತಯಾರಿಸುವ ಸಂಬಂಧ ತಯಾರಿ ನಡೆಸಬೇಕಾಗಿದೆ ಎಂದರು. ಫಲಾನುಭವಿಗಳಿಗೆ ನೀಡುವ ಹಕ್ಕುಪತ್ರಗಳ ಕುರಿತು ಪಿಡಿಒಗಳ ಜೊತೆಗೂ ಮಾತುಕತೆ ನಡೆಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ತಹಶೀಲ್ದಾರ್ ತಿರುಪತಿ ಪಾಟೀಲ್, ತಾ.ಪಂ. ಇಒ ರಾಮಭೋವಿ, ನ್ಯಾಮತಿ ತಹಶೀಲ್ದಾರ್ ಗಿರೀಶ್ ಬಾಬು, ಸಿಪಿಐ ಸಿದ್ದೇಗೌಡ, ಪಿಎಸ್‌ಐ ಶಿವಕುಮಾರ್, ನ್ಯಾಮತಿ ಪಿಎಸ್‌ಐ ರಾಘವೇಂದ್ರ ಕಾಂಡಕಿ ಹಾಗೂ ಅವಳಿ ತಾಲ್ಲೂಕಿನ ಅಧಿಕಾರಿಗಳು ಹಾಗೂ ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಜೆ.ಕೆ. ಸುರೇಶ್, ಮುಖಂಡರಾದ ಎ.ಬಿ. ಹನುಮಂತಪ್ಪ, ನವೀನ್ ಇಂಚರ, ಮಂಜುನಾಥ್, ಅರಕೆರೆ ನಾಗರಾಜ್, ತಾಂಡಾ ಅಭಿವೃದ್ಧಿ ನಿಗಮದ ನಿರ್ದೇಶಕ ಮಾರುತಿನಾಯ್ಕ, ಜಿ.ಪಂ. ಮಾಜಿ ಸದಸ್ಯ ಸುರೇಂದ್ರನಾಯ್ಕ, ಎಚ್.ಎ. ರಾಕೇಶ್, ದಿಶಾ ಕಮಿಟಿ ಜಿಲ್ಲಾ ನಿರ್ದೇಶಕ ನೆಲಹೊನ್ನೆ ಮಂಜುನಾಥ್ ಹಾಜರಿದ್ದರು.

# ಪುತ್ರನ ಬಳಿ ಸಿಕ್ಕಿದ್ದು 8.12 ಕೋ.ರೂ.

(1ನೇ ಪುಟದಿಂದ) ದೂರುದಾರ ನೀಡಿದ ದೂರಿನ ಮೇರೆಗೆ ಕಾರ್ಯಚರಣೆ ನಡೆಸಿ ಪ್ರಶಾಂತ್ ಅವರನ್ನು ರೆಡ್ ಹ್ಯಾಂಡ್ ಆಗಿ ಬಂಧಿಸಿದ ಲೋಕಾಯುಕ್ತ ಪೊಲೀಸರ ಕಾರ್ಯಚರಣೆಯನ್ನು ಅವರು ಇದೇ ಸಂದರ್ಭದಲ್ಲಿ ಮುಕ್ತಕಂಠದಿಂದ ಶ್ಲಾಘಿಸಿದರು.

ಲೋಕಾಯುಕ್ತ ಸಂಸ್ಥೆಗೆ ಮತ್ತಷ್ಟು ಸಿಬ್ಬಂದಿಗಳ ಅವಶ್ಯಕತೆ ಇದ್ದು, ಮುಂದಿನ ದಿನಗಳಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಂಡು ಸಂಸ್ಥೆಯನ್ನು ಮತ್ತಷ್ಟು ಸದೃಢಗೊಳಿಸಿ ಭ್ರಷ್ಟರ ವಿರುದ್ಧದ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಲೋಕಾಯುಕ್ತ ಬಿ.ಎಸ್. ಪಾಟೀಲ್ ವಿವರಿಸಿದರು.

## ರಾಜೀನಾಮೆ ಅಂಗೀಕಾರ

(1ನೇ ಪುಟದಿಂದ) ಆಪಾದನೆ ಬಂದಿರುವುದರಿಂದ ನೈತಿಕ ಹೊಣೆ ಹೊತ್ತು ಕೆಎಸ್‌ಡಿಎಲ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿರುವುದಾಗಿ ರಾಜೀನಾಮೆ ಪತ್ರದಲ್ಲಿ ಮಾಡಾಳ್ ಉಲ್ಲೇಖಿಸಿದ್ದಾರೆ.

ಕಾನೂನಿಗೆ ತಲೆಬಾಗಿ ರಾಜೀನಾಮೆ ನೀಡಿರುವುದಾಗಿ ಹೇಳಿರುವ ಮಾಡಾಳ್ ಅವರು, ಪಕ್ಷ ಮತ್ತು ಸರ್ಕಾರಕ್ಕೆ ಮುಜುಗರ ಉಂಟಾಗಬಾರದು ಎಂಬ ಕಾರಣಕ್ಕೆ ರಾಜೀನಾಮೆ ನೀಡಿದ್ದೇನೆ ಎಂದಿದ್ದಾರೆ.ಮಾಡಾಳ್ ಅವರ ರಾಜೀನಾಮೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಂಗೀಕರಿಸಿದ್ದಾರೆ.

## ಎಫ್.ಐ.ಆರ್., ಬಂಧನಕ್ಕಾಗಿ ಶೋಧ

(1ನೇ ಪುಟದಿಂದ) ಲಂಚ ಪ್ರಕರಣ ದಲ್ಲಿ ಮಾಡಾಳ್ ವಿರೂಪಾಕ್ಷಪ್ಪ ಅವರೇ ಮೊದಲ ಆರೋಪಿಯಾಗಿದ್ದಾರೆ. ಮಗ ಪ್ರಶಾಂತ್ ಎರಡನೇ ಆರೋಪಿಯಾಗಿ ದ್ದಾರೆ. ಕೆ.ಎಸ್.ಡಿ.ಎಲ್. ಅಕೌಂಟೆಂಟ್ ಸುರೇಂದ್ರ, ಪ್ರಶಾಂತ್ ಸಂಬಂಧಿ ಸಿದ್ದೇಶ್, ಆರೋಮ ಕಂಪ ನಿಯ ಆಲ್ಬರ್ಟ್ ನಿಕೋಲ ಹಾಗೂ ಗಂಗಾಧರ ಇತರೆ ಆರೋಪಿಗಳಾಗಿ ದ್ದಾರೆ. ಮಾಡಾಳ್ ವಿರೂಪಾಕ್ಷಪ್ಪ ಬಂಧನದ ಭೀತಿ ಎದುರಿಸುತ್ತಿದ್ದಾರೆ. ಅವರ ಬಂಧ ನಕ್ಕಾಗಿ ಶೋಧ ಕಾರ್ಯ ನಡೆದಿದೆ. ಈ ನಡುವೆ, ಚನ್ನಗಿರಿ ಯಲ್ಲಿರುವ ಅವರ ನಿವಾಸ ಹಾಗೂ ಕಚೇರಿಯ ಮೇಲೆ ಲೋಕಾಯುಕ್ತ ಪೊಲೀಸರು ಶುಕ್ರವಾರ ಮಧ್ಯಾಹ್ನ ದಾಳಿ ನಡೆಸಿದ್ದಾರೆ. ನಗದು, ಆಸ್ತಿ ದಾಖಲೆಗಳು ಹಾಗೂ ಆಭರಣಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ.


## ಪ್ರಶಾಂತ್ 14 ದಿನ ಕಸ್ಟಡಿಗೆ

(1ನೇ ಪುಟದಿಂದ) ನಿರ್ದೇಶಕ ಮಹೇಶ್ ನಿವಾಸ ಸೇರಿದಂತೆ ನಗರದಲ್ಲಿ ಮೂರು ಕಡೆ ಹಾಗೂ ಚನ್ನಗಿರಿಯಲ್ಲಿರುವ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರಿಗೆ ಸೇರಿದ ಎರಡು ಮನೆಗಳ ಮೇಲೆ ದಾಳಿ ನಡೆಸಿದ್ದರು.

ದಾಳಿ ಸಂದರ್ಭದಲ್ಲಿ ಪ್ರಶಾಂತ್ ಅವರ ನಿವಾಸದಲ್ಲಿ 6 ಕೋಟಿ ರೂ. ನಗದು ಪತ್ತೆಯಾಗಿತ್ತು. ಈ ಘಟನೆಯ ನಂತರ ಪ್ರಶಾಂತ್, ಅವರ ಅಕೌಂಟೆಂಟ್ ಹಾಗೂ ಲಂಚ ನೀಡಲು ಪ್ರಶಾಂತ್ ಕಚೇರಿಗೆ ಆಗಮಿಸಿದ್ದ ಮೂವರನ್ನು ಬಂಧಿಸಲಾಗಿತ್ತು.

ಬಂಧಿತ ಐವರು ಆರೋಪಿಗಳನ್ನು ಇಂದು ಬೆಳಿಗ್ಗೆ ಲೋಕಾಯುಕ್ತ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರು ಪಡಿಸಲಾಯಿತು. ಈ ಸಂದರ್ಭದಲ್ಲಿ ನ್ಯಾಯಾಧೀಶರು ಆರೋಪಿಗಳನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.


## ನಗರದಲ್ಲಿ ಇಂದು ಶ್ರೀ ಸದ್ಯೋಜಾತ ಸ್ವಾಮೀಜಿ ಸ್ಮರಣೋತ್ಸವ



ಶ್ರೀ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಗಳ 15ನೇ ಸಂಸ್ಮರೋಣೋತ್ಸವವು ಇಂದು ಸಂಜೆ 6 ಗಂಟೆಗೆ ಸದ್ಯೋಜಾತ ಮಠದಲ್ಲಿ ನಡೆಯಲಿದೆ.


ಕಾರ್ಯಕ್ರಮದ ಸಾನ್ನಿಧ್ಯವನ್ನು ಉಜ್ಜಯಿನಿ ಪೀಠದ ಶ್ರೀ ಸಿದ್ಧಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದ ಸ್ವಾಮೀಜಿ ವಹಿಸಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು. 'ಸಮಾಜಕ್ಕೆ ಸ್ವಾಮೀಜಿಗಳ ಕೊಡುಗೆ' ವಿಷಯ ಕುರಿತು ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಂ. ದಾರುಕೇಶ್ ಉಪನ್ಯಾಸ ನೀಡಲಿದ್ದಾರೆ. ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ, ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಮುಖ್ಯಅತಿಥಿಗಳಾಗಿ ಭಾಗವಹಿಸಲಿದ್ದಾರೆ.

### ಚಿಕ್ಕವೀರಪ್ಪ.ಜಿ ನಿಧನ




ದಾವಣಗೆರೆ ಜಯನಗರ 'ಸಿ' ಬ್ಲಾಕ್ ಡೋರ್ ನಂ. 872/10ನೇ ವಾಸಿಯಾದ, ಶ್ರೀಮತಿ ಗಂಗಮ್ಮನವರ ಪತಿಯಾದ ನಿವೃತ್ತ ಕೆಇಬಿ ನೌಕರರಾದ ಶ್ರೀ ಚಿಕ್ಕವೀರಪ್ಪ.ಜಿ (70) ಇವರು ದಿನಾಂಕ 03.03.2023ರ ಶುಕ್ರವಾರ ಸಂಜೆ 4ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 4.03.2023ರ ಶನಿವಾರ ಮಧ್ಯಾಹ್ನ 12 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

### ಎಸ್. ನಾಗಯ್ಯ ನಿಧನ



ದಾವಣಗೆರೆ ಕೆ.ಬಿ ಬಡಾವಣೆ ಶಿವಪ್ಪಯ್ಯ ಸರ್ಕಲ್ ತ್ರಿಶೂಲ್ ಟಾಕೀಸ್ ರಸ್ತೆ ವಾಸಿ ಎಸ್.ನಾಗಯ್ಯ (56) ಇವರು ದಿನಾಂಕ 03.03.2023ರ ಶುಕ್ರವಾರ ಮಧ್ಯಾಹ್ನ 4ಕ್ಕೆ ನಿಧನರಾದರು. ಇಬ್ಬರು ಪುತ್ರಿಯರು, ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 4.03.2023ರ ಶನಿವಾರ ಮಧ್ಯಾಹ್ನ 12 ಗಂಟೆಗೆ ನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

### ಶಾಮನೂರು ಹನುಮಂತಪ್ಪ ನಿಧನ



ದಾವಣಗೆರೆ ತಾಲ್ಲೂಕು ಹಿಂಡಸಕಟ್ಟೆ ಗ್ರಾಮದ ವಾಸಿ ಶಾಮನೂರು ಹನುಮಂತಪ್ಪ (78) ಇವರು ದಿನಾಂಕ 03.03.2023ರ ಶುಕ್ರವಾರ ಸಂಜೆ 5.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 4.03.2023ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಹಿಂಡಸಕಟ್ಟೆ ಗ್ರಾಮದಲ್ಲಿ ನೆರವೇರಲಿದೆ.

## ಸಿದ್ದಮ್ಮನಹಳ್ಳಿಯಲ್ಲಿ ಶೇಂಗಾ ಬೆಳೆ ಪ್ರಾತ್ಯಕ್ಷಿಕೆ

ಜಗಳೂರು,ಮಾ.3- ತಾಲ್ಲೂಕಿನ ಸಿದ್ದಮ್ಮನಹಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಎಣ್ಣೆ ಕಾಳು ಯೋಜನೆ ಅಡಿಯ ಗುಚ್ಚ ಗ್ರಾಮಗಳ ಮುಂಚೂಣಿ ಪ್ರಾತ್ಯಕ್ಷಿಕೆ ತಾಕುಗಳಿಗೆ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಭೇಟಿ ನೀಡಿ ರೈತರಿಗೆ ಸಲಹೆ ನೀಡಿದರು.

ಶೇಂಗಾದಲ್ಲಿ ಜಿಗಿ ಹುಳುವಿನ ಬಾಧೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಿದ್ದು, ನಿಯಂತ್ರಣಕ್ಕೆ ಕ್ಲೋರೋಪೈರಿಪಾಸ್, ಸೈಪರ್ ಮೆತ್ರಿನ್ ಎರಡು ಮಿಲಿ ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪರಣೆ ಮಾಡಬೇಕಾಗಿದೆ. ಅದೇ ರೀತಿಯಲ್ಲಿ ಎಲೆಚುಕ್ಕಿ ರೋಗ ಕಂಡು ಬಂದಲ್ಲಿ ಮೆಟಲಾಕ್ಸಿಲ್, ಮ್ಯಾಂಕೊಜಟ್ 2 ಗ್ರಾಮ ಪ್ರತಿ ಲೀಟರ್‌ನಂತೆ ಸಿಂಪರಣೆ ಮಾಡಬೇಕು ಎಂದು ಸಸ್ಯ ಸಂರಕ್ಷಣಾ ತಜ್ಞ ಡಾ. ಅವಿನಾಶ್ ಟಿ. ಜಿ. ರೈತರಿಗೆ ತಿಳಿಸಿಕೊಟ್ಟರು. ಬೇಸಾಯ ತಜ್ಞ ಮಲ್ಲಿಕಾರ್ಜುನ್, ನೀರನ್ನು ಸರಿಯಾದ ಸಮಯಕ್ಕೆ ಒದಗಿಸಿದರೆ ಮಾತ್ರ ಉತ್ತಮ ಇಳುವರಿ ಪಡೆಯಬಹುದು ಎಂದರು.



## ಘೋಷಣೆಗಿಂತ ಮುಂಚೆಯೇ ಆಮಿಷ

(1ನೇ ಪುಟದಿಂದ) ಕಾಡತೊಡಗಿದೆ. ಹೀಗಾಗಿ ನಾನಾ ರೀತಿಯ ತಂತ್ರಗಾರಿಕೆ ಅನುಸರಿಸುತ್ತಿದ್ದಾರೆ. ಚುನಾವಣೆಯಲ್ಲಿ ಹಣದ ಹೊಳೆ ಹರಿಯುವ ಸುಳಿವು ಅರಿತಿರುವ ಇ.ಡಿ., ಐ.ಟಿ. ಸೇರಿದಂತೆ ರಾಷ್ಟ್ರೀಯ ಸಂಸ್ಥೆಗಳಿಗೆ ಸಂಬಂಧಿಸಿದ ಅಧಿಕಾರಿಗಳು ರಾಜ್ಯದ ಆಯಕಟ್ಟಿನ ಸ್ಥಳದಲ್ಲಿದ್ದು, ಈಗಾಗಲೇ ಕಾರ್ಯಾಚರಣೆಗೆ ಇಳಿದಿದ್ದಾರೆ.

ಗೋವಾ, ತಮಿಳುನಾಡು ಹಾಗೂ ದೆಹಲಿಯ ಕಚೇರಿಗಳಿಂದ ಅಧಿಕಾರಿಗಳು ರಾಜ್ಯಕ್ಕೆ ಆಗಮಿಸಿದ್ದಾರೆ. ಸ್ಪರ್ಧೆ ಖಾತ್ರಿಯಾಗಿರುವ ಕೆಲವು ಆಕಾಂಕ್ಷಿಗಳು ಟಿವಿ, ಕುಕ್ಕರ್, ತವಾ, ಮಿಕ್ಸಿ, ಸೀರೆ ಉಡುಗೊರೆ ನೀಡಿದ್ದಾರೆ. ಬಹಳಷ್ಟು ಮಂದಿ ಪ್ರವಾಸಕ್ಕೆ ಬಸ್ ಭಾಗ್ಯ ಕಲ್ಪಿಸಿದ್ದಾರೆ. ನೀತಿ ಸಂಹಿತೆ ಜಾರಿಯಾದರೆ ಇಂತಹ ಆಮಿಷಗಳನ್ನು ಒಡ್ಡಲಾಗುವುದಿಲ್ಲ ಎಂಬ ಕಾರಣಕ್ಕೆ ಈಗಾಗಲೆ ಉಡುಗೊರೆ ಭಾಗ್ಯ ಕರುಣಿಸಿದ್ದಾರೆ.

ಇಂತಹ ವಿಚಾರಗಳ ಬಗ್ಗೆಯೂ ಗಮನ ಹರಿಸಿರುವ ಅಧಿಕಾರಿಗಳು ಸೂಕ್ತ ಕಾಲದಲ್ಲಿ ನಡೆಸಲು ಸಿದ್ಧತೆ ನಡೆಸಲಾಗಿದೆ.

ರಾಜಕೀಯ ಪಕ್ಷಗಳು ಹಾಗೂ ಚುನಾವಣಾ ಕಣದಲ್ಲಿನ ಅಭ್ಯರ್ಥಿಗಳು ನಡೆಸುವ ಖರ್ಚುಗಳ ಮೇಲೆ ಚುನಾವಣಾ ಆಯೋಗ ಹದ್ದಿನ ಕಣ್ಣು ಇಡುವುದು ಒಂದೆಡೆಯಾದರೆ, ಮತ್ತೊಂದೆಡೆ ಚುನಾವಣಾ ಸಮಯದಲ್ಲಿ ಆರ್ಥಿಕ ಸಂಪನ್ಮೂಲ ಒದಗಿಸುವ ವ್ಯಕ್ತಿಗಳು ಹಾಗೂ ಸಂಸ್ಥೆಗಳ ವ್ಯವಹಾರದ ಮೇಲೆ ಈ ಅಧಿಕಾರಿಗಳು ಕಣ್ಣಿಡಲಿದ್ದಾರೆ.

ಈಗಾಗಲೇ ಕೆಲವು ಸಂಸ್ಥೆ ಹಾಗೂ ವ್ಯಕ್ತಿಗಳ ಮೇಲೆ ದಾಳಿಯಾಗಿದ್ದರೂ ಬಹಿರಂಗಗೊಂಡಿಲ್ಲ ಎಂದು ಉನ್ನತ ಮೂಲಗಳು ತಿಳಿಸಿವೆ.

ವಿಶೇಷವಾಗಿ ಬ್ಯಾಂಕ್ ಗಳ ವಹಿವಾಟಿನ ಮೇಲೆ ನಿಗಾ ಇಡಲಾಗಿದೆ. ಜತೆಗೆ ಅನಗತ್ಯವಾಗಿ ಗೃಹ ಬಳಕೆ ವಸ್ತುಗಳ ಖರೀದಿಯ ಮೇಲೂ ಗಮನ ಹರಿಸಲಾಗುತ್ತಿದೆ.

## ಯೋಗ ಫೆಸ್ಟಿವಲ್: ಮಹಿನ್ ಹಂಪನೂರು ಪ್ರಥಮ



ದಾವಣಗೆರೆ, ಮಾ. 2 - ಇತ್ತೀಚೆಗೆ ನಡೆದ ಬೆಂಗಳೂರು 2023 ಇಂಟರ್‌ನ್ಯಾಷನಲ್ ಯೋಗ ಫೆಸ್ಟಿವಲ್‌ನಲ್ಲಿ ನಗರದ ಬಾಲಕ ಮಹಿನ್ ಹಂಪನೂರು ಪ್ರಥಮ ಸ್ಥಾನ ಪಡೆದಿದ್ದಾರೆ.

ನ್ಯಾಷನಲ್ ಪಬ್ಲಿಕ್ ಸ್ಕೂಲ್ ನ 8ನೇ ತರಗತಿಯ ವಿದ್ಯಾರ್ಥಿ ಮಹಿನ್ ಹಂಪನೂರು ಅವರು 10-15 ವರ್ಷದ ವಿಭಾಗದಲ್ಲಿ ತರಬೇತುದಾರರಾದ ಸಂತೋಷ ಮಾರ್ಗ ದರ್ಶನದಲ್ಲಿ ಭಾಗವಹಿಸಿದ್ದರು. ಮಹಿನ್, ಶ್ರೀಮತಿ ಸುಮ ಮತ್ತು ಮಹಾದೇವ್ ಹಂಪನೂರು ಅವರ ಪುತ್ರ. ಇವರಿಗೆ ಶಾಲೆಯ ಅಧ್ಯಕ ಎಸ್.ಎಸ್. ಗಣೇಶ್ ಅಭಿನಂದಿಸಿದ್ದಾರೆ.

## ಕೃಷಿ ವಲಯಕ್ಕೆ ಅವಕಾಶ ನೀಡಿ



(1ನೇ ಪುಟದಿಂದ) ಎಐಕೆಎಸ್ ರಾಜ್ಯಾಧ್ಯಕ್ಷ ಡಾ. ಸಿದ್ದನಗೌಡ ಪಾಟೀಲ್ ಹೇಳಿದರು. ಪಟ್ಟಣದ ಪ್ರವಾಸಿಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಕೃಷಿ ಸಂಬಂಧಿತ ಕರಾಳ ಕಾಯ್ದೆಗಳಿಗೆ, ರಾಜ್ಯದಲ್ಲಿ ಭೂ ಸುಧಾರಣೆ ಕಾಯ್ದೆಗಳಿಗೆ ತಿದ್ದುಪಡಿ ತರಲಾಗಿದೆ. ಭೂ ಸುಧಾರಣೆ ಕಾಯ್ದೆ ಬದಲು, ಭೂ ಸ್ವಾಧೀನ ಕಾಯ್ದೆ ಆಗುತ್ತಿರುವುದು ವಿಷಾದದ ಸಂಗತಿಯಾಗಿದೆ ಎಂದರು.

ಭಾರತ ಕಮ್ಯುನಿಸ್ಟ್ ಪಕ್ಷದಿಂದ ರಾಜ್ಯದಲ್ಲಿ ಗುಲ್ಬರ್ಗ, ಅಳಂದ, ಜೇವರ್ಗಿ, ಕೂಡ್ಲಿಗಿ, ಶಿರಾ, ಕೆಜಿಎಫ್ 6 ಕಡೆಗಳಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಲಿದೆ. ಉಳಿದಂತೆ ಚಿಕ್ಕಮಗಳೂರು, ಮೂಡಿಗೇರಿ ಬಗ್ಗೆ ಇತರೆ ಕಡೆಗಳಲ್ಲಿ ಸ್ಪರ್ಧಿಸುವ ಬಗ್ಗೆ ಚಿಂತನೆ ನಡೆದಿದೆ ಎಂದರು.

ಎಐಕೆಎಸ್ ರಾಜ್ಯ ಕಾರ್ಯದರ್ಶಿ ಪಿ.ವಿ. ಲೋಕೇಶ್ ಮಾತನಾಡಿ, ಸರ್ಕಾರಗಳು ಸೃಷ್ಟಿಸುತ್ತಿರುವ ಕೃಷಿ ಬಿಕ್ಕಟ್ಟಿನ ಹೋರಾಟಕ್ಕಾಗಿ ಐಕ್ಯ ಚಳವಳಿ ಅಗತ್ಯವಿದೆ, ಇದಕ್ಕಾಗಿ ರಾಜ್ಯದಲ್ಲಿ ಎರಡು ಬಾರಿ ಸಂಯುಕ್ತ ಹೋರಾಟ ಸಮಿತಿ ಮೂಲಕ ಸಭೆ ನಡೆದಿವೆ. ದೆಹಲಿ ಮಾದರಿಯಂತೆ ಮುಂದಿನ ದಿನಗಳಲ್ಲಿ ಕಿಸಾನ ಸಂಘಟನೆಗಳ ಸಮನ್ವಯ ಸಮಿತಿ ಅಡಿಯಲ್ಲಿ ಹೋರಾಟ ರೂಪಿಸಲಾಗುವುದು ಎಂದರು.

ಚುನಾವಣೆ ಬಳಿಕ ಕೃಷಿಕರ ಮೇಲೆ ಪರಿಣಾಮ ಬೀರಲಿದೆ. ಹಾಗಾಗಿ ಎಲ್ಲಾ ರೈತ ಸಂಘಟನಗಳು ತಮ್ಮ ಭಿನ್ನಾಭಿಪ್ರಾಯ ಬದಿಗೊತ್ತಿ ಹೋರಾಟ ಮಾಡುವ ತುರ್ತು ಅಗತ್ಯ ಇದೆ ಎಂದರು.

**ಬೃಹತ್ ಸಮಾವೇಶ:** ಸೂರಿಗಾಗಿ ಸಮರ ಜಾಥವು ರಾಜ್ಯದಲ್ಲಿ ಆರಂಭ ಮಾಡಲಾಗಿತ್ತು. ಕೋವಿಡ್‌ನಿಂದಾಗಿ ಸ್ಥಗಿತ್ತಗೊಂಡಿತ್ತು. ಪ್ರಸ್ತುತ ಜಾಥವು ಮುಂದುವರೆದಿದ್ದು, ಇದೇ ದಿನಾಂಕ 9 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ಹತ್ತಿರ ಸಾಮೂಹಿಕ ಸಂಘಟನೆಗಳೊಂದಿಗೆ ಬೃಹತ್ ಬಹಿರಂಗ ಸಭೆ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಎಸ್. ಜನಾರ್ಧನ, ಭಾರತೀಯ ಜನಕಲಾ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ಷಣ್ಮುಖಸ್ವಾಮಿ, ಗುಡಿಹಳ್ಳಿ ಹಾಲೇಶ, ಶಾಂತರಾಜ ಜೈನ್, ಹಲಗಿ ಸುರೇಶ್, ರಮೇಶನಾಯ್ಕ ಇತರರು ಇದ್ದರು.



## ಲಕ್ಕಶೆಟ್ಟಿಹಳ್ಳಿ : ಸಂಭ್ರಮದ ರಥೋತ್ಸವ

ಮಲೇಬೆನ್ನೂರು, ಮಾ.3- ಲಕ್ಕಶೆಟ್ಟಿ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವವು ಶುಕ್ರವಾರ ಸಂಜೆ ಗ್ರಾಮಸ್ಥರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು. ನಂತರ ಓಕುಳಿ ನಡೆಯಿತು.

## ಹೋಳಿ ಹಬ್ಬ : ರಾಣೇಬೆನ್ನೂರಿನಲ್ಲಿ ವಿವಿಧ ಸ್ಪರ್ಧೆ

ರಾಣೇಬೆನ್ನೂರು, ಮಾ.3- ಸ್ಥಳೀಯ ರತಿ ಕಾಮದೇವರ ಉತ್ಸವ ಸಮಿತಿ ವತಿಯಿಂದ ಹೋಳಿ ಹಬ್ಬದ ಪ್ರಯುಕ್ತ ಇದೇ ದಿನಾಂಕ 6, 7 ರಂದು ನಗರದ ಕಾಕಿಗಲ್ಲಿಯಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಇದೇ ದಿನಾಂಕ 6ರಂದು ಸಂಜೆ 6ಕ್ಕೆ ತಮಟೆ ಬಾರಿಸುವ ಸ್ಪರ್ಧೆ ನಡೆಯಲಿದೆ. ದಿನಾಂಕ 7ರಂದು ಸಂಜೆ 6ಕ್ಕೆ ರಂಗೋಲಿ ಸ್ಪರ್ಧೆ ಜರುಗಲಿದ್ದು, ವಿಪ ಸದಸ್ಯ ಆರ್.ಶಂಕರ್ ಚಾಲನೆ ನೀಡುವರು. ಜೆಡಿಎಸ್ ಮುಖಂಡ ಮಂಜುನಾಥ ಗೌಡ ಶಿವಣ್ಣನವರ ಅಧ್ಯಕ್ಷತೆ ವಹಿಸುವರು. ವಿವರಕ್ಕೆ ಸಂಪರ್ಕಿಸಿ : 7019997478, 9113968715, 7259684371, 99023610.

# ಮಲೇಬೆನ್ನೂರು : ಖವ್ವಾಲಿ ನೋಡಲು ದಾಖಲೆ ಜನ



ಮಲೇಬೆನ್ನೂರು, ಮಾ. 3- ಸೌಹಾರ್ದತೆ ಸಾರುವ ಇಲ್ಲಿನ ಪ್ರಸಿದ್ಧ ಹಜರತ್ ಸೈಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ಗಂಧ ಮತ್ತು ಉರುಸು ಗುರುವಾರ ರಾತ್ರಿ ದರ್ಗಾ ಆವರಣದಲ್ಲಿ ಪ್ರಸಿದ್ಧ ಖಾವ್ವಲರಿಂದ ಹಮ್ಮಿಕೊಂಡಿದ್ದ ಖವ್ವಾಲಿ ಕಾರ್ಯಕ್ರಮವನ್ನು ನೋಡಲು ಹರಿಹರ, ದಾವಣಗೆರೆ, ರಾಣೆಬೆನ್ನೂರು, ಹೊನ್ನಾಳಿ, ಚನ್ನಗಿರಿ, ಬಸವಾಪಟ್ಟಣ, ತುಮ್ಮಿನಕಟ್ಟಿ, ರಟ್ಟೀಹಳ್ಳಿ ಸೇರಿದಂತೆ ದೂರದ ಊರುಗಳಿಂದ ಜನ ದಾಖಲೆ ಸಂಖ್ಯೆಯಲ್ಲಿ ಆಗಮಿಸಿದ್ದರು.

ಯುವ ಗಾಯಕ ಉತ್ತರ ಪ್ರದೇಶದ ರಿಯೀಸ್ ಹನೀಫ್ ಅವರ ಖವ್ವಾಲಿ ಜನಮನ ಸೆಳೆಯಿತು. ಆತನ ಹಾಡುಗಳಿಗೆ ಹುಚ್ಚೆದ್ದು ಕುಣಿದ ಯುವಕರು ನೋಟಿನ ಸುರಿಮಳೆ ಸುರಿಸಿ ಖುಷಿ ಪಟ್ಟರು.

ದೆಹಲಿಯ ಘೋಟೆ ಮಜೀದ್ ಶೋಲೆ ಅವರ ಖವ್ವಾಲಿ ಕೂಡ ಆಕರ್ಷಣೀಯವಾಗಿತ್ತು. ಪಟ್ಟಣದ ಹೆದ್ದಾರಿ, ಬಸ್ ನಿಲ್ದಾಣ ಸೇರಿದಂತೆ ಎಲ್ಲಾ ಸ್ಥಳಗಳು ವಾಹನಗಳಿಂದ ಭರ್ತಿಯಾಗಿದ್ದವು.

ಶಾಸಕ ಎಸ್ ರಾಮಪ್ಪ, ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್, ಜಿ ಪಂ ಮಾಜಿ ಸದಸ್ಯರಾದ ಬೆಣ್ಣೆಹಳ್ಳಿ ಹಾಲೇಶಪ್ಪ, ಎಂ. ನಾಗೇಂದ್ರಪ್ಪ, ಬಿ.ಎಂ. ವಾಗೀಶ್ ಸ್ವಾಮಿ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಉರುಸ್ ಕಮಿಟಿ ಅಧ್ಯಕ್ಷ ಖುರ್ಬಾನ್ ಅಲಿ, ಮುಖಂಡರಾದ ಸೈಯದ್ ಜಾಕೀರ್, ಎಂ.ಬಿ. ಸಜ್ಜು, ಸಿರಿಗೆರೆ ಪರಮೇಶ್ವರಗೌಡ, ಕೆ.ಪಿ. ಗಂಗಾಧರ್. ಶೇರ್ ಅಲಿ, ಸಿ. ಅಬ್ದುಲ್ ಹಾದಿ, ಎಂ.ಬಿ.ಗುಲ್ಜಾರ್ ಸಾಬ್, ಎಂ.ಬಿ. ಫೈಜು, ಬಿ. ರಫೀವುಲ್ಲಾ, ಖುದ್ದೂಸ್ ಸಾಬ್, ಶಕ್ತಿ ಸಾ ಮಿಲ್ ಮುನ್ನಾ, ಯೂನಸ್, ಪುರಸಭೆ ಸದಸ್ಯರಾದ ನಯಾಜ್, ಸಾಬೀರ್, ಮಹಮದ್ ಖಲೀಲ್, ಷಾ ಅಬ್ರಾರ್, ದಾದಾಫೀರ್, ಚಮನ್ ಷಾ, ಬಿ. ಮಂಜುನಾಥ್, ಪುರಸಭೆ ಮಾಜಿ ಸದಸ್ಯರಾದ ಎ. ಆರೀಫ್ ಅಲಿ, ಯೂಸೂಫ್, ದಾದಾವಲಿ, ಜಿಯಾವುಲ್ಲಾ, ಗ್ರಾ. ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್. ಶಿವಕುಮಾರ್, ವೀರಭದ್ರೇಶ್ವರ ದೇವಸ್ಥಾನದ ಬಿ.ವಿ. ರುದ್ರೇಶ್ ಮತ್ತು ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಸೇರಿದಂತೆ ಇನ್ನೂ ಅನೇಕರು ದರ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಿ ಖಾವ್ವಾಲಿಯಲ್ಲಿ ಭಾಗವಹಿಸಿದ್ದರು.

ಸಿಪಿಐ ಗೌಡಪ್ಪ ಗೌಡ, ಪಿ.ಎಸ್.ಐ. ಪ್ರಭು ಕೆಳಗಿನಮನೆ, ಎಎಸ್‌ಐ ಶ್ರೀನಿವಾಸ್ ಅವರ ನೇತೃತ್ವದಲ್ಲಿ ನೂರಾರು ಪೊಲೀಸರು ವಾಹನಗಳ ಹಾಗೂ ಜನರ ನಿಯಂತ್ರಣಕ್ಕೆ ಹರಸಾಹಸ ಪಟ್ಟರು.

# ಹರನಹಳ್ಳಿ - ಕೆಂಗಾಪುರದಲ್ಲಿ ಇಂದು ಅಕ್ಷರ ಜಾತ್ರೆ

## ದಾವಣಗೆರೆ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನ




ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ದಾವಣಗೆರೆ ಜಿಲ್ಲಾ 12 ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚನ್ನಗಿರಿ ತಾಲ್ಲೂಕು ಹರನಹಳ್ಳಿ - ಕೆಂಗಾಪುರದ ಶ್ರೀ ರಾಮಲಿಂಗೇಶ್ವರ ಮಠದ ಆವರಣದಲ್ಲಿ ಇಂದು ಚಾಲನೆ ದೊರೆಯಲಿದೆ.

ಇಂದು ಬೆಳಿಗ್ಗೆ 8.30 ಕ್ಕೆ ಕಣಿವೆ ಬಿಳಚಿ ಗ್ರಾ.ಪಂ. ಅಧ್ಯಕ್ಷೆ ದಾಬುಬಾಯಿ ರಾಷ್ಟ್ರಧ್ವಜಾರೋಹಣವನ್ನು, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಪರಿಷತ್ತಿನ ಧ್ವಜಾರೋಹಣವನ್ನು, ಹೊನ್ನಾಳಿ ಉಪ ವಿಭಾಗದ ಉಪವಿಭಾಗಾಧಿಕಾರಿ ಹುಲ್ಮನಿ ತಿಮ್ಮಣ್ಣ ನಾಡ ಧ್ವಜಾರೋಹಣವನ್ನು ನೆರವೇರಿಸಲಿದ್ದಾರೆ.

ಬೆಳಿಗ್ಗೆ 9 ಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಆರಂಭಗೊಳ್ಳಲಿದೆ. ಎಸ್ಪಿ ಸಿ.ಬಿ. ರಿಷ್ಯಂತ್ ಮೆರವಣಿಗೆಗೆ ಚಾಲನೆ ನೀಡುವರು. ಮುಖ್ಯ ಅತಿಥಿಗಳಾಗಿ ಚನ್ನಗಿರಿ ತಹಶೀಲ್ದಾರ್ ಎಂ.ಪಿ.ರಿಸ್ವಾಮಿ, ಡಿವೈಎಸ್ಪಿ ಡಾ. ಸಂತೋಷ್, ಜಿಲ್ಲಾ ಸಂಘಗಳ ನೋಂದಣಾಧಿಕಾರಿ ಅನ್ನಪೂರ್ಣ, ಪಿಯು ಡಿಡಿ ಎಂ. ಶಿವರಾಜ್, ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ, ಪ್ರಾಂಶುಪಾಲರಾದ ಎ. ಎಸ್. ಶೈಲಜಾ, ಬಸವಾಪಟ್ಟಣ ಸಿಪಿಐ ಎಸ್.ಬಿ. ಅಜ್ಜಪ್ಪ, ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಸಿ.ಬಿ. ರವಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದ ಜಿಲ್ಲಾಧ್ಯಕ್ಷ ಡಿ.ಡಿ. ಹಾಲಪ್ಪ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮುಬಾರಕ್ ಅಲಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಡಿ. ರಾಮಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

ಬೆಳಗ್ಗೆ 11 ಗಂಟೆಗೆ ಸಮ್ಮೇಳನದ ಉದ್ಘಾಟನಾ ಸಮಾರಂಭ ಜರುಗಲಿದ್ದು, ಶಾಸಕ ಪ್ರೊ.ಎನ್. ಲಿಂಗಣ್ಣ ಅಧ್ಯಕ್ಷತೆ ವಹಿಸುವರು. ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಾಡೋಜ ಮಹೇಶ್ ಜೋಶಿ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ.

ಸೂಳೆಕೆರೆ ಶಾಂತವ್ವ ವೇದಿಕೆಯನ್ನು ಸಂಸದ ಜಿ.ಎಂ. ಸಿದ್ದೇಶ್ವರ, ಕೆಳದಿ ಚನ್ನಮ್ಮ ಮಹಾಮಂಟಪವನ್ನು ಸಚಿವ ಭೈರತಿ ಬಸವರಾಜ್, ಕೆಂಗಪ್ಪ ನಾಯಕ ಮಹಾದ್ವಾರವನ್ನು ಶಾಸಕ ಮಾಡಾಳು ವಿರೂಪಾಕ್ಷಪ್ಪ, ಡಾ. ಎಂ. ಚಿದಾನಂದಪ್ಪ ಪುಸ್ತಕ ಮಳಿಗೆಗಳ ಉದ್ಘಾಟನೆಯನ್ನು ಶಾಸಕ ಎಸ್.ವಿ. ರಾಮಚಂದ್ರ ನೆರವೇರಿಸುವರು. ಯುಗಧರ್ಮ ರಾಮಣ್ಣ ಸಮ್ಮೇಳನಾಧ್ಯಕ್ಷರಾಗಿ ಪಾಲ್ಗೊಳ್ಳಲಿದ್ದಾರೆ.

ನಿಕಟಪೂರ್ವ ಸಮ್ಮೇಳನಾಧ್ಯಕ್ಷರಾದ ಸುಶೀಲಾದೇವಿ ಆರ್. ರಾವ್ ಕನ್ನಡ ಧ್ವಜ ಹಸ್ತಾಂತರ ಮಾಡಲಿದ್ದು, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ 'ಜ್ಞಾನ ಗಂಗೆ' ಸ್ಮರಣ ಸಂಚಿಕೆಯನ್ನು ಬಿಡುಗಡೆ ಹಾಗೂ ಕಸಾಪ ನಿಕಟಪೂರ್ವ ಜಿಲ್ಲಾಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಕೃತಿಗಳ ಬಿಡುಗಡೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ಮಾಜಿ ಶಾಸಕರಾದ ಎಂ. ಬಸವರಾಜನಾಯ್ಕ, ವಡ್ನಾಳ್ ರಾಜಣ್ಣ, ಮಹಿಮಾ ಜೆ. ಪಟೇಲ್, ಕೆ. ಶಿವಮೂರ್ತಿನಾಯ್ಕ, ಕಸಾಪ ಕೇಂದ್ರ ಸಮಿತಿ ಸದಸ್ಯ ಜಿ. ರುದ್ರಯ್ಯ, ತಾ.ಪಂ. ಇಓ ಎಂ.ಆರ್.ಪ್ರಕಾಶ್, ಕೆಂಗಾಪುರ ಶ್ರೀ ರಾಮಲಿಂಗೇಶ್ವರ ವಿದ್ಯಾಸಂಸ್ಥೆ ಅಧ್ಯಕ್ಷ ಹೆಚ್.ಆರ್. ವಿಜಯಕುಮಾರ್, ರಾಷ್ಟ್ರೀಯ ಗೋವು ಸೇವಾ ಸಂಘದ ರಾಜ್ಯಾಧ್ಯಕ್ಷ ಬಿ.ಟಿ. ಸಿದ್ದಪ್ಪ, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ದಿನೇಶ್ ಪೂಜಾರಿ, ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ರಾಜಶೇಖರ ಗುಂಡಗಟ್ಟಿ, ಕಸಾಪ ನಿಕಟಪೂರ್ವ ಅಧ್ಯಕ್ಷ ಎ.ಆರ್. ಉಜ್ಜನಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ಗೋಷ್ಠಿ ವಿಶೇಷ ಉಪನ್ಯಾಸ, ಯುವ ಕವಿಗೋಷ್ಠಿ, ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

## ಜಾನಪದ ಕವಿ ಯುಗ ಧರ್ಮ ರಾಮಣ್ಣ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ



ಜಾನಪದ ಸಾಹಿತ್ಯ 64 ವಿದ್ಯೆಗಳಿಗೆ ತಾಯಿ ಬೇರು. ಲೋಕಾನುಭವದ ಈ ನಿಧಿಯ ಬಗ್ಗೆ ಪ್ರಾಥ ಮಿಕ ಹಂತದಲ್ಲಿಯೇ ಪರಿಚಯಿಸುವ ಶಿಕ್ಷಣದ ಮೂಲಕ ಇಂದಿನ ಮಕ್ಕಳಿಗೆ ಜಾನಪದದ ಜ್ಞಾನವನ್ನು ನೀಡುವ ಅಗತ್ಯತೆ, ಅನಿವಾರ್ಯತೆ ಇದೆ. ಹೊಟ್ಟೆ ಹೊರೆಯುವ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ನೆತ್ತಿ ಹೊರೆಯುವ ಜಾನಪದ ಶಿಕ್ಷಣಕ್ಕೆ ಬೇಡಿಕೆ ಇಲ್ಲದಂತಾಗಿದೆ.ಇದರ ಬಗ್ಗೆ ಸರ್ಕಾರ, ಸಮಾಜ, ಶಿಕ್ಷಣ ತಜ್ಞರಿಗೆ ಒಲವಿಲ್ಲದಂತಾಗಿದೆ. ಈಗಿನ ಆಧುನಿಕ ಸಾಹಿತ್ಯದಲ್ಲಿ ಜಾನಪದ ಸಾಹಿತ್ಯ ತನ್ನ ಅಸ್ತಿತ್ವ ಕಳೆದುಕೊಂಡು ಕಾಲಕ್ರಮೇಣ ನಶಿಸಿ ಹೋಗುತ್ತಿದೆ. ಯಾವ ಸ್ವಾರ್ಥ, ಪ್ರತಿಫಲ ಅಪೇಕ್ಷೆ ಇಲ್ಲದೇ ರಚಿಸಿದ ನಿಜವಾದ ಕವಿಗಳು ನಮ್ಮ ಜಾನಪದರು. ಜಾನಪದವೇ ನಿಜವಾದ ಭಾಷಾ ಸಾಹಿತ್ಯ. ನೈಜವಾದ ಜ್ಞಾನದ ಉತ್ಪತ್ತಿಯಾಗುವ, ಆಡುಭಾಷೆಯಲ್ಲಿ ಆಕಾಶವನ್ನೇ ಅಳೆಯುವ ತಾಕತ್ತಿರುವುದು ನಮ್ಮ ಜಾನಪದ ಸಾಹಿತ್ಯಕ್ಕಿದೆ.

ಈ ನಿಟ್ಟಿನಲ್ಲಿ ಇದನ್ನು ಮನಗಂಡು ನಮ್ಮ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಜಾನಪದ ಕವಿಯೆಂದೇ ಪ್ರಸಿದ್ಧರಾದ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ 'ಯುಗ ಧರ್ಮ ರಾಮಣ್ಣ' ನವರನ್ನು ಗುರುತಿಸಿ 12 ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿರುವುದು ಕನ್ನಡಿಗರಾದ ನಾವು ಹೆಮ್ಮೆ ಪಡುವ ವಿಚಾರವಾಗಿದೆ.

ಸಿರಿಗನ್ನಡಂ ಗೆಲ್ಗೆ.. ಸಿರಿನ್ನಡಂ ಬಾಳ್ಗೆ.....

**- ಡಾ.ಅನಿತಾ ಹೆಚ್.ದೊಡ್ಡಗೌಡರ್,**
ಸಹಾಯಕ ಪ್ರಾಧ್ಯಾಪಕರು, ದಾವಣಗೆರೆ.

## ಕಸಾಪ ಪದಾಧಿಕಾರಿಗಳಿಂದ ವೇದಿಕೆ ಸ್ಥಳ ಪರಿಶೀಲನೆ

ಹರನಹಳ್ಳಿ-ಕೆಂಗಾಪುರದಲ್ಲಿ ನಡೆಯುತ್ತಿರುವ ದಾವಣಗೆರೆ ಜಿಲ್ಲಾ 12 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಿದ್ಧತೆಗಳು ಭರದಿಂದ ಸಾಗಿದ್ದು, ಜಿಲ್ಲಾ ಕಸಾಪ ಪದಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ, ಮಾಜಿ ಅಧ್ಯಕ್ಷ ಎ.ಆರ್.ಉಜ್ಜನಪ್ಪ, ಗೌರವ ಕಾರ್ಯದರ್ಶಿಗಳಾದ ಬಿ.ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ, ಗೌರವ ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ, ಸಂಘಟನಾ ಕಾರ್ಯದರ್ಶಿ ಸಿ.ಜಿ.ಜಗದೀಶ್ ಕೂಲಂಬಿ, ಜಿಗಳಿ ಪ್ರಕಾಶ್, ತಾಲೂಕು ಅಧ್ಯಕ್ಷ ಮಧುಕುಮಾರ್, ಕೇಂದ್ರ ಕಸಾಪ ಕಾರ್ಯಕಾರಿ ಸಮಿತಿ ಸದಸ್ಯ ಜಿ.ರುದ್ರಯ್ಯ, ಶ್ರೀ ರಾಮಲಿಂಗೇಶ್ವರ ವಿದ್ಯಾ ಸಂಸ್ಥೆಯ ಹೆಚ್.ಆರ್. ಹಾಲೇಶ್, ಆಡಳಿತಾಧಿಕಾರಿ ರಘು ದೊಡ್ಡಮನಿ, ಬೇತೂರು ಷಡಾಕ್ಷರಪ್ಪ ಮತ್ತಿತರರು ಹಾಜರಿದ್ದರು.




## ನೌಕರರಿಗೆ ಓಓಡಿ ಸೌಲಭ್ಯ

ಚನ್ನಗಿರಿ ತಾಲ್ಲೂಕು ಕೆಂಗಾಪುರದಲ್ಲಿ ಇಂದು ಮತ್ತು ನಾಳೆ ನಡೆಯುವ ದಾವಣಗೆರೆ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು, ಪದವಿ ಪೂರ್ವ ಕಾಲೇಜು ಉಪನ್ಯಾಸಕರಿಗೆ ಅನ್ಯಕಾರ್ಯ ನಿಮಿತ್ತ ಎಂದು ಪರಿಗಣಿಸಿ ಓಓಡಿ ಸೌಲಭ್ಯ ನೀಡಲಾಗುವುದು.

## ಸಮ್ಮೇಳನಕ್ಕೆ ಹೋಗಲು ಉಚಿತ ಸಾರಿಗೆ ವ್ಯವಸ್ಥೆ

ಕೆಂಗಾಪುರದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನಕ್ಕೆ ಹೋಗುವ ಸಾಹಿತ್ಯ ಅಭಿಮಾನಿಗಳಿಗೆ, ಸಾರ್ವಜನಿಕರಿಗೆ , ಕನ್ನಡಾಭಿಮಾನಿಗಳಿಗೆ, ಸಾಹಿತಿಗಳಿಗೆ ದಾವಣಗೆರೆಯಿಂದ ಕೆಂಗಾಪುರ, ಚನ್ನಗಿರಿ, ಕಬ್ಬಳ, ಬಸವಾಪಟ್ಟಣ ಭಾಗದಿಂದ ಕೆಂಗಾಪುರಕ್ಕೆ ಉಚಿತ ಸಾರಿಗೆ ವ್ಯವಸ್ಥೆಯನ್ನು ಮಾಡಲಾಗಿದೆ. ಶ್ರೀ ರಾಮಲಿಂಗೇಶ್ವರ ವಿದ್ಯಾಸಂಸ್ಥೆಯ ಬಸ್‌ಗಳನ್ನು ಉಚಿತವಾಗಿ ಬಿಡಲಾಗಿದೆ ಎಂದು ಸಂಸ್ಥೆ ಅಧ್ಯಕ್ಷ ವಿಜಯಕುಮಾರ್ ತಿಳಿಸಿದ್ದಾರೆ.

## ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಮಹೇಶ್



ಹರಿಹರ, ಮಾ. 3- ಹರಿಹರ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆಂಚನಹಳ್ಳಿ ಗ್ರಾಮದ ಕೆ.ಹೆಚ್. ಮಹೇಶ್ ಅವರು ಶುಕ್ರವಾರ ನಡೆದ ಚುನಾವಣಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮಲೇಬೆನ್ನೂರಿನ ಸಿ. ಅಬ್ದುಲ್ ಹಾದಿ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು. ತಾ. ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸುನೀತಾ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಸಂಘದ ಉಪಾಧ್ಯಕ್ಷ ರುದ್ರಪ್ಪ, ನಿರ್ದೇಶಕರಾದ ಸಿ. ಅಬ್ದುಲ್ ಹಾದಿ, ಜಿ.ಹೆಚ್. ರಾಮನಗೌಡ, ಟಿ. ಬಸವರಾಜ್, ಎ. ಗಂಗಾಧರಪ್ಪ, ಸಣ್ಣ ಚಂದ್ರಾನಾಯ್ಕ, ಎಂ. ನಿಂಗನಗೌಡ, ಎನ್.ಜಿ. ಜಯಣ್ಣ, ಹೆಚ್. ಆಂಜನೇಯ, ಕೆ. ಅಬುಜಾರ್, ಬನ್ನಿಕೋಡು ಕಾಂತರಾಜ್, ಶ್ರೀಮತಿ ವನಜಾಕ್ಷಮ್ಮ, ಶ್ರೀಮತಿ ಅನುಪಮ, ಕೆಂಚವೀರಯ್ಯ ಹಾಜರಿದ್ದು, ಅವಿರೋಧ ಆಯ್ಕೆಗೆ ಸಹಕರಿಸಿದರು.

ಹಿರಿಯರಾದ ಸಿರಿಗೆರೆ ನಾಗನಗೌಡ್ರು, ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ, ಸಿರಿಗೆರೆ ಪರಮೇಶ್ವರಗೌಡ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಿ. ಹಾಲೇಶಪ್ಪ, ಭಾನುವಳ್ಳಿ ಕೊಟ್ರಪ್ಪ, ಆರ್.ಸಿ. ಪಾಟೀಲ್ ಮತ್ತಿತರರು ಈ ವೇಳೆ ನೂತನ ಅಧ್ಯಕ್ಷರನ್ನು ಅಭಿನಂದಿಸಿದರು. ಸಂಘದ ಕಾರ್ಯದರ್ಶಿ ಗಣೇಶ್ ಸ್ವಾಗತಿಸಿದರು.


## ಹಂಪನೂರಿನಲ್ಲಿ ಇಂದು ದೊಡ್ಡ ಎಡೆ

ಚಿತ್ರದುರ್ಗ ತಾಲ್ಲೂಕು ಹಂಪನೂರಿನಲ್ಲಿ ನಡೆಯುತ್ತಿರುವ ಶ್ರೀ ರಂಗನಾಥ ಸ್ವಾಮಿ ಹಾಗೂ ಶ್ರೀ ರಾಮೇಶ್ವರ ಸ್ವಾಮಿ ನೂತನ ರಥೋತ್ಸವದ ಅಂಗವಾಗಿ ಇಂದು ಶನಿವಾರ ಮಧ್ಯಾಹ್ನ 12 ಗಂಟೆಗೆ ಶ್ರೀ ರಂಗನಾಥ ಸ್ವಾಮಿಯ ದೊಡ್ಡ ಎಡೆ ಮತ್ತು ಮಹಾಮಂಗಳಾರತಿಯೊಂದಿಗೆ ಕಾರ್ಯಕ್ರಮಕ್ಕೆ ತೆರೆ ಬೀಳುವುದು.

## ಪರಿಸರ ಪಿಹೆಚ್‌ಡಿ ಸಂಶೋಧನೆಗೆ ಅರ್ಜಿ

ದಾವಣಗೆರೆ, ಮಾ. 3 - ವಿಶ್ವವಿದ್ಯಾನಿಲಯದಲ್ಲಿ 2022-23ನೇ ಸಾಲಿನ ಸ್ನಾತಕೋತ್ತರ ಪರಿಸರ ಅಧ್ಯಯನ ವಿಭಾಗದ ಪಿಹೆಚ್‌ಡಿ ಸಂಶೋಧನೆ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಏಪ್ರಿಲ್ 5 ಕೊನೆಯ ದಿನವಾಗಿರುತ್ತದೆ. ಸಂಶೋಧನಾ ಸ್ಥಾನಗಳಿಗೆ ಅರ್ಜಿಯನ್ನು ವೆಬ್‌ಸೈಟ್ www.davangereuniversity.ac.in ಸಂಪರ್ಕಿಸಬಹುದೆಂದು ವಿಶ್ವವಿದ್ಯಾನಿಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**ಗಾಯನ ಸಭಾ, ದಾವಣಗೆರೆ.**



ಶ್ರೀ ತ್ಯಾಗರಾಜರ ಹಾಗೂ ಶ್ರೀ ಪುರಂದರ ದಾಸರ ಆರಾಧನೆಯ ಪ್ರಯುಕ್ತ
**ಸಂಗೀತ ಕಾರ್ಯಕ್ರಮ**



ದಿನಾಂಕ : 04-03-2023ರ ಶನಿವಾರ, ಸಮಯ : ಸಂಜೆ 5-30 ಕ್ಕೆ
ಸ್ಥಳ : ಡಿ.ಆರ್.ಎಂ. ಸೈಟ್ ಸಭಾಂಗಣ, ಪಿ.ಜೆ. ಬಡಾವಣೆ,
1ನೇ ಮೇನ್ ರೋಡ್, ಬ್ರಾಹ್ಮಣ ಹಾಸ್ಟೆಲ್ ಎದುರು, ದಾವಣಗೆರೆ.

ಶ್ರೀ ತ್ಯಾಗರಾಜರ ಹಾಗೂ ಶ್ರೀ ಪುರಂದರ ದಾಸರ ಆರಾಧನೆಯ ಪ್ರಯುಕ್ತ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಕೆಲಕಾಲದ ವಿರಾಮದ ನಂತರ ನಡೆಯುತ್ತಿರುವ ಈ ಕಾರ್ಯಕ್ರಮಕ್ಕೆ 'ಗಾಯನ ಸಭಾ'ದ ಸದಸ್ಯರುಗಳು ಹಾಗೂ ಸಂಗೀತ ಪ್ರಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.

ಕಾರ್ಯದರ್ಶಿ ಮತ್ತು ಕಾರ್ಯಕಾರಿ ಸಮಿತಿ,
ಗಾಯನ ಸಭಾ, ದಾವಣಗೆರೆ.





# ಗ್ರಾಮೀಣ ಪ್ರದೇಶದಲ್ಲೇ ಹೆಚ್ಚಿನ ವಿಜ್ಞಾನಿಗಳ ಸೃಷ್ಟಿ

ದಾವಣಗೆರೆ, ಮಾ.3 - ಮಕ್ಕಳಲ್ಲಿ ಕಲಿಯುವ ಇಚ್ಛಾಶಕ್ತಿ, ಜ್ಞಾನಶಕ್ತಿ ಹಾಗೂ ಕ್ರಿಯಾಶಕ್ತಿ ಜಾಗೃತಗೊಳಿಸುವ ಜವಾಬ್ದಾರಿ ಪಾಲಕರ ಮೇಲಿದೆ ಎಂದು ಕೇಂದ್ರ ಪರಿಸರ ಸಚಿವಾಲಯ ಮತ್ತು ಹವಾಮಾನ ಬದಲಾವಣೆ ಇಲಾಖೆ ಸದಸ್ಯ ಹಾಗೂ ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಅಧ್ಯಕ್ಷ ಡಾ.ಜೆ.ಬಿ.ರಾಜ್ ಹೇಳಿದರು.

ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಪ್ರಯುಕ್ತ ನಗರದ ಸೊಫ್ರೊಸೈನ್ ಕಾನ್ಸೆಪ್ಟ್ ಶಾಲೆಯಲ್ಲಿ ಕಳೆದ ವಾರ ನಡೆದ 'ಎಲ್ಲಿ ಜ್ಞಾನವೋ ಅಲ್ಲಿ ವಿಜ್ಞಾನ' ಎಂಬ ಪ್ರಗ್ಯಾನ್ - 2023 ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ವಿಜ್ಞಾನಿಗಳು ಸಮಾಜದ ಸ್ವತ್ತು. ಕೆಸರಲ್ಲಿ ಕಮಲ ಅರಳುವಂತೆ, ಬಡತನ ಮತ್ತು ಗ್ರಾಮೀಣ ಪ್ರದೇಶಗಳಲ್ಲಿಯೇ ವಿಜ್ಞಾನಿಗಳು ಹುಟ್ಟುವುದು. ಹೆಚ್ಚಿನವಿಜ್ಞಾನಿಗಳುಗ್ರಾಮೀಣಪ್ರದೇಶದಿಂದಲೇ ಸೃಷ್ಠಿಯಾಗಿದ್ದಾರೆ. ಮಹಿಳೆಯರು ಅಡುಗೆ ಮನೆಯ ವಸ್ತುಗಳಿಂದಲೇ ಮಕ್ಕಳಲ್ಲಿರುವ ವಿಜ್ಞಾನದ ಮನೋಭಾವ ಕೆರಳಿಸಬಹುದು ಎಂದು ಸ್ಫೂರ್ತಿಯ ನುಡಿಗಳನ್ನಾಡಿದರು.



ಸೊಫ್ರೊಸೈನ್ ಕಾನ್ಸೆಪ್ಟ್ ಶಾಲೆಯಲ್ಲಿನ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಅಧ್ಯಕ್ಷ ಡಾ.ಜೆ.ಬಿ.ರಾಜ್

ಇನ್ನೋರ್ವ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ ಮಾತನಾಡಿ, ಧಾರವಾಹಿ ನೋಡುತ್ತ ಕಾಲಹರಣ ಮಾಡುವ ಕೆಲವು ಪೋಷಕರಿಗೆ ಮಕ್ಕಳಲ್ಲಿ ವೈಜ್ಞಾನಿಕ ದೃಷ್ಠಿಕೋನ ಬೆಳೆಸಬೇಕು. ವಿಜ್ಞಾನದ ಮನೋಭಾವನೆ ಬೆಳೆಸುವುದರಿಂದ ಮಕ್ಕಳನ್ನು ಕ್ರಿಯಾಶೀಲ ಚಿಂತಕರನ್ನಾಗಿ ಮಾಡುತ್ತದೆ ಎಂದರು.

ವಿಜ್ಞಾನ ವಸ್ತು ಪ್ರದರ್ಶನದ ನಿರ್ಣಾಯಕರಾಗಿ ಜೀವಶಾಸ್ತ್ರ ಉಪನ್ಯಾಸಕ ಎಸ್.ಆರ್. ಸಿದ್ದೇಶ್ ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಶಿವ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ. ಎಲ್. ಜಗದೀಶ, ಆಡಳಿತಾಧಿಕಾರಿ ಟಿ.ಎನ್. ಶಿವಯೋಗಿ ಪ್ರಾಂಶುಪಾಲ ಕೆ. ಮೊಹಮ್ಮದ್ ಖಾಲಿದ್ ಹಾಗೂ ಎಚ್. ಅರ್ಜುನ್ ಮತ್ತು ಗ್ರಾ.ಪಂ. ಅಧ್ಯಕ್ಷ ಬಸವೇಶ್ ಪಟೇಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸಂಗೀತ ಲೋಕಕ್ಕೆ ಪುಟ್ಟರಾಜ ಗವಾಯಿಗಳ ಕೊಡುಗೆ ಅಪಾರ



ಲಿಂ.ಡಾ.ಪಂ.ಪುಟ್ಟರಾಜ ಕವಿ ಗವಾಯಿಗಳ ಜಯಂತ್ಯುತ್ಸವದಲ್ಲಿ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ

ದಾವಣಗೆರೆ, ಮಾ.3- ಸಂಗೀತ ಸಾರಸ್ವತ ಲೋಕಕ್ಕೆ ಲಿಂ.ಡಾ.ಪಂ.ಪುಟ್ಟರಾಜ ಕವಿ ಗವಾಯಿಗಳವರ ಕೊಡುಗೆ ಅಪಾರವಾದದ್ದು ಎಂದು ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಶ್ರೀಗುರು ಪುಟ್ಟರಾಜ ನಗರದಲ್ಲಿನ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ 264ನೇ ಹೋಳಿ ಹುಣ್ಣಿಮೆಯ ಶಿವಾನುಭವ ಗೋಷ್ಠಿ, ಲಿಂ.ಡಾ.ಪಂ.ಪುಟ್ಟರಾಜ ಕವಿ ಗವಾಯಿಗಳವರ 109ನೇ ಜಯಂತ್ಯುತ್ಸವ ಮತ್ತು ಸಂಗೀತ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಪಂ.ಪುಟ್ಟರಾಜ ಗವಾಯಿಗಳು ಭೌತಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ, ಜನಮಾನಸದ ಹೃದಯ ಸಿಂಹಾಸನಾರೂಢವಾಗಿ ನೆಲೆಸಿದ್ದಾರೆ. ತಮ್ಮ ತಪಸ್ಸಿನ ಶಕ್ತಿಯಿಂದ ಗದ್ದುಗೆಯಲ್ಲಿದ್ದೇ ತಮ್ಮನ್ನು ನಂಬಿರುವ ಭಕ್ತರಿಗೆ ಆಶೀರ್ವದಿಸುವ ಮೂಲಕ ಮನಸಂಕಲ್ಪಗಳನ್ನು ಈಡೇರಿಸುತ್ತಿದ್ದಾರೆ ಎಂದು ಹೇಳಿದರು.

ಧರ್ಮದ ಮೌಲ್ಯಗಳನ್ನು ಮೈಗೂಡಿಸಿ ಕೊಂಡಾಗ ಮನುಷ್ಯ ಮಹದೇವನಾಗುತ್ತಾನೆ. ಈ ಹಿನ್ನೆಲೆಯಲ್ಲಿ ಧರ್ಮದ ನೆಲೆಗಟ್ಟಿನಲ್ಲಿ ಬದುಕು ಕಟ್ಟಿಕೊಳ್ಳಬೇಕು ಎಂಬುದು ಪಂ.ಪುಟ್ಟರಾಜ ಗವಾಯಿಗಳವರ ಉದ್ದೇಶವಾಗಿತ್ತು ಎಂದರು.

ಅವರು ನಡೆದಾಗುವ ದೇವರಾಗಿ, ಸಾರಸ್ವತ ಲೋಕದ ರಸಋಷಿಗಳಾಗಿ, ತಪಯೋಗಿಗಳಾಗಿ 97 ವರ್ಷಗಳ ಕಾಲ ಲಕ್ಷಾಂತರ ಭಕ್ತರಿಗೆ, ಅಂದ ಕಲಾವಿದರ ಬಾಳಿಗೆ ಬೆಳಕಾಗಿದ್ದರು. ನಾಡಿಗೆ ಅವರ ಕೊಡುಗೆ ಅನನ್ಯವಾದದ್ದು ಎಂದು ಹೇಳಿದರು.

ನಾಲ್ಕು ಭಾಷೆಗಳಲ್ಲಿ ಪುರಾಣ, ದಾರ್ಶನಿಕರ ಚರಿತ್ರೆ ಬರೆದಿದ್ದ ಗವಾಯಿಗಳು, ಕಣ್ಣಿಲ್ಲದಿದ್ದರೂ ತಮ್ಮ ಕಾರುಣ್ಯದ ಮೂಲಕ ಮನುಕುಲದ ಕಣ್ಣು ತೆರೆಸಿದ ಮಹಾನ್ ಪುರುಷರು ಎಂದು ಬಣ್ಣಿಸಿದರು.

ಗದಗ, ಶಿವಮೊಗ್ಗ ಹಾಗೂ ದಾವಣಗೆರೆಯಲ್ಲಿನ ಈ ಮೂರು ಆಶ್ರಮಗಳು ಪುಟ್ಟರಾಜ ಗವಾಯಿಗಳ ಮೂರು ಕಣ್ಣುಗಳಿದ್ದಂತೆ. ತಮ್ಮ ಬಳಿ ಬರುವುದಕ್ಕಿಂತ ಅಂಧ ಜನರಿಗೆ ಸಹಾಯ ಮಾಡುವಂತೆ ಪುಟ್ಟರಾಜ ಗವಾಯಿಗಳು ಕರೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಎಲ್ಲಿಯೇ ಆಗಲಿ ಅಂಧರ ಬಾಳಿಗೆ ಬೆಳಕಾಗುವ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಶ್ರೀ ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಹಾನಗರ ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಗೋಪಿನಾಯ್ಕ, ಶಿವಮೊಗ್ಗ ಶ್ರೀ ವೀರೇಶ್ವರ ಪುಣ್ಯಾಶ್ರಮದ ಆರ್.ಬಿ. ಸಂಗಮೇಶ್ವರ ಗವಾಯಿಗಳು ಉಪಸ್ಥಿತರಿದ್ದರು.

ಶಿವಬಸವಸ್ವಾಮಿ ಚರಂತಿಮಠ ನಿರೂಪಿಸಿದರು. ಅಜ್ಜಂಪುರ ಶೆಟ್ರು ಮೃತ್ಯುಂಜಯ ಸ್ವಾಗತಿಸಿದರು.

## ಯುನೈಟೆಡ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ವಿಜ್ಞಾನ ದಿನಾಚರಣೆ



ದಾವಣಗೆರೆ, ಮಾ. 3- ಯುನೈಟೆಡ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಈಚೆಗೆ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಕ್ಷ ದಾದಾಪೀರ್, ಶಾಲೆಯ ಪ್ರಾಂಶುಪಾಲ ವಾಸಿಂ ಪಾಷಾ, ಕಾರ್ಯದರ್ಶಿ ಕು. ಫಿರ್ದೋಸ್, ಉಪ ಪ್ರಾಂಶುಪಾಲರಾದ ಶ್ರೀಮತಿ ಯಾಸ್ಮಿನ್, ಆಡಳಿತಾಧಿಕಾರಿ ಅಶ್ಫಕ್ ಅಹ್ಮದ್, ಸಂಯೋಜಕಿ ಶ್ರೀಮತಿ ಶರ್ಫುನ್ನೀಸಾ, ನಿರ್ವಹಣಾ ಸದಸ್ಯರಾದ ಅಲ್ತಾಫ್ ಅಸದಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ವಿಜ್ಞಾನದ ಕುರಿತು ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ವಿಜ್ಞಾನದ ಅರಿವು ಮೂಡಿಸಲು ವೇಷಭೂಷಣ ಧರಿಸಿ, ಪ್ಲಾಸ್ಟಿಕ್ ಬಳಕೆ ಹಾನಿಕಾರ ಎಂಬುದನ್ನು ತಿಳಿಸಲಾಯಿತು.

## ರಾಣೇಬೆನ್ನೂರಿನಲ್ಲಿ ಇಂದು ಗುರುವಂದನಾ ಕಾರ್ಯಕ್ರಮ

ರಾಣೇಬೆನ್ನೂರ, ಮಾ.3 - ಜಿ.ಪಂ.ಮಾಜಿ ಸದಸ್ಯ ಸಂತೋಷ ಕುಮಾರ ಪಾಟೀಲ ಅವರ ಹುಟ್ಟು ಹಬ್ಬದ ಅಂಗವಾಗಿ ನಗರದ ಹಲಗೇರಿ ರಸ್ತೆಯ ನವಯುಗದ ಕಚೇರಿಯಲ್ಲಿ ನಾಳೆ ದಿನಾಂಕ 4ರ ಶನಿವಾರ ಬೆಳಿಗ್ಗೆ 10.30ಕ್ಕೆ ಸರ್ವಧರ್ಮ ಗುರುಗಳ ಗುರುವಂದನಾ ಕಾರ್ಯಕ್ರಮ ನಡೆಯಲಿದೆ ಎಂದು ಸಂತೋಷಕುಮಾರ ಪಾಟೀಲ ಅಭಿಮಾನಿ ಬಳಗದ ಅಧ್ಯಕ್ಷ ಯುವರಾಜ ಬಾರಾಟಕ್ಕೆ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾರ್ಯಕ್ರಮ ದಲ್ಲಿ ವಿವಿಧ ಮಠಗಳ ಸ್ವಾಮೀಜಿಗಳು ಪಾಲ್ಗೊಳ್ಳಲಿದ್ದು, ಅವರ ಪಾದಪೂಜೆಯ ಮೂಲಕ ಸತ್ಕರಿಸಲಾಗುವುದು. ಮಾಜಿ ಶಾಸಕ ವಿ. ಎಸ್.ಕರ್ಜಗಿ ಅವರ ಪುತ್ರ ಡಾ.ಸಂಜಯ ಕರ್ಜಗಿ, ಮಾಜಿ ಶಾಸಕ ಜಿ.ಶಿವಣ್ಣ ಪುತ್ರ ಗುರುರಾಜ ತಿಳವಳ್ಳಿ ಅವರ ಮಾರ್ಗ ದರ್ಶನದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಅಭಿಮಾನಿ ಬಳಗದ ಮುಖಂಡರಾದ ಸಿದ್ದನಗೌಡ ಪಾಟೀಲ, ಕಿರಣ ಬುಳನಗೌಡ್ರ, ಮಂಜು ಶಿರಗೇರಿ, ಚಂದ್ರಶೇಖರ ಗೋಣಿಬಸಮ್ಮನವರ, ಹನುಮಂತರಾಜ ಚನ್ನಗೌಡ್ರ, ಕುಬೇರಪ್ಪ ಅಟವಾಳಗಿ, ಚಂದ್ರು ನಾಯ್ಕ ಸೇರಿದಂತೆ ಇತರರಿದ್ದರು.

## ಭಾರತದಲ್ಲಿ ಸ್ಥೂಲಕಾಯ ಮಕ್ಕಳ ಹೆಚ್ಚಳ : ವರದಿ

ನವದೆಹಲಿ, ಮಾ. 3 – ಬಾಲ್ಯದ ಸ್ಥೂಲಕಾಯ 2035ರ ವೇಳೆಗೆ ಶೇ.9.1ರಷ್ಟು ಹೆಚ್ಚಾಗಲಿದೆ ಎಂದು ಜಾಗತಿಕ ಅಧ್ಯಯನವೊಂದು ತಿಳಿಸಿದೆ. ಮಾ.4ರ ವಿಶ್ವ ಸ್ಥೂಲಕಾಯ ದಿನಾಚರಣೆಯ ಮುನ್ನಾ ದಿನ ಈ ವರದಿ ಬಿಡುಗಡೆ ಮಾಡಲಾಗಿದೆ.

ವಿಶ್ವ ಸ್ಥೂಲಕಾಯ ಒಕ್ಕೂಟದ ವತಿಯಿಂದ ಈ ವರದಿ ರೂಪಿಸಲಾಗಿದೆ. ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ಇನ್ನು 12 ವರ್ಷಗಳಲ್ಲಿ ವಿಶ್ವದಾದ್ಯಂತ ಶೇ.50ರಷ್ಟು ಮಕ್ಕಳು ಬೊಜ್ಜು ಸಮಸ್ಯೆಯಿಂದ ಬಳಲಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಭಾರತದಲ್ಲಿ 2035ರ ವೇಳೆಗೆ ಶೇ.11ರಷ್ಟು ಜನರು ಸ್ಥೂಲಕಾಯದ ಸಮಸ್ಯೆಗೆ ಸಿಲುಕಲಿದ್ದಾರೆ ಎಂದೂ ವರದಿಯಲ್ಲಿ ತಿಳಿಸಲಾಗಿದೆ.

2020ರಲ್ಲಿ ಶೇ.3ರಷ್ಟು ಮಕ್ಕಳಲ್ಲಿ ಸ್ಥೂಲಕಾಲಯದ ಅಪಾಯ ಇತ್ತು. ಇದು 2035ರ ವೇಳೆಗೆ ಶೇ.12ಕ್ಕೆ ತಲುಪಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಆದಾಯ ಕಡಿಮೆ ಇರುವ ದೇಶಗಳಲ್ಲಿ ಸಿದ್ಧ ಆಹಾರದ ಮೊರೆ ಹೋಗುತ್ತಿರುವುದೇ ಸಮಸ್ಯೆ ಭುಗಿಲೇಳಲು ಕಾರಣವಾಗಿದೆ. ಬೊಜ್ಜುತನಕ್ಕೆ ಕಾರಣವಾಗುವ ಆಹಾರಗಳ ನಿಯಂತ್ರಣಕ್ಕೆ ಸಮರ್ಪಕ ಕ್ರಮಗಳಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ.

## ದೊಡ್ಡಬಾತಿಯಲ್ಲಿ 7ರಂದು ಶ್ರೀ ರೇವಣಸಿದ್ದೇಶ್ವರ ಸ್ವಾಮಿ ತೇರು



ದಾವಣಗೆರೆ ತಾಲ್ಲೂಕಿನ ದೊಡ್ಡಬಾತಿ ಗ್ರಾಮದ ಶ್ರೀ ರೇವಣ ಸಿದ್ದೇಶ್ವರ ಸ್ವಾಮಿಯ ಮಹಾರಥೋತ್ಸವವು ಇದೇ ದಿನಾಂಕ 7ರ ಮಂಗಳವಾರ ರಾತ್ರಿ 12 ಗಂಟೆಗೆ ನಡೆಯಲಿದ್ದು, ರಥೋತ್ಸವದ ಪ್ರಯುಕ್ತ ಇಂದಿನಿಂದ ವಿವಿಧ ಕಾರ್ಯಕ್ರಮಗಳು ಜರುಗಲಿವೆ.

ಇಂದು ರಾತ್ರಿ ಪಾಲ್ದಾರ ಗೌಡ್ರು ಕನ್ನಪ್ಪಳ ಮನೆತನದವರಿಂದ ಶ್ರೀ ಸ್ವಾಮಿಗೆ ಅರಿಶಿಣ ಎಣ್ಣೆ, ಉಚ್ಚಾಯ ಕಾರ್ಯ ಜರುಗಲಿದೆ.

ದಿನಾಂಕ 5ರ ಭಾನುವಾರ ರಾತ್ರಿ ಬಣಕಾರ ಮನೆತನದವರಿಂದ ಶ್ರೀ ಸ್ವಾಮಿಗೆ ಅರಿಶಿಣ ಎಣ್ಣೆ, ಉಚ್ಚಾಯ ಕಾರ್ಯ ನಡೆಯಲಿದೆ.

ದಿನಾಂಕ 6ರ ಸೋಮವಾರ ಆವರಗೊಳ್ಳದ ಶ್ರೀ ವೀರಭದ್ರೇಶ್ವರ ಸ್ವಾಮಿಯು ದೊಡ್ಡಬಾತಿಗೆ ದಯಮಾಡಿಸುವುದು.

ದಿನಾಂಕ 8ರ ಬುಧವಾರ ರಾತ್ರಿ ಓಕಳಿ ಜರುಗಲಿದೆ.

## ಇಂದು ಪಾಲಿಕೆ ಮೇಯರ್ ಉಪಮೇಯರ್ ಚುನಾವಣೆ

ದಾವಣಗೆರೆ ಮಹಾನಗರ ಪಾಲಿಕೆಯ ಮೇಯರ್-ಉಪ ಮೇಯರ್ ಸ್ಥಾನಗಳಿಗೆ ಇಂದು ಚುನಾವಣೆ ನಡೆಯಲಿದೆ.

ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಮೇಯರ್ ಸ್ಥಾನ ಹಾಗೂ ಸಾಮಾನ್ಯ ಮಹಿಳೆಗೆ ಮೀಸಲಾದ ಉಪ ಮೇಯರ್ ಸ್ಥಾನಗಳಿಗೆ ಮಧ್ಯಾಹ್ನ 12ರಿಂದ 1ರವರೆಗೆ ನಾಮಪತ್ರಗಳನ್ನು ಸ್ವೀಕರಿಸಲಾಗುತ್ತದೆ. ಮಧ್ಯಾಹ್ನ 3ರಿಂದ ಸಭೆ ಆರಂಭವಾಗಲಿದೆ.

ಚುನಾವಣಾಧಿಕಾರಿಯಾಗಿ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಕಾರ್ಯ ನಿರ್ವಹಿಸಲಿದ್ದಾರೆ.

ಪಾಲಿಕೆಯಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದರೂ, ಮೇಯರ್ ಸ್ಥಾನಕ್ಕೆ ಅಭ್ಯರ್ಥಿ ಇಲ್ಲದ ಕಾರಣ ಅಧಿಕಾರ ಬಿಟ್ಟುಕೊಡುವ ಅನಿವಾರ್ಯತೆ ಬಂದೊದಗಿದೆ. ಕಾಂಗ್ರೆಸ್ ಸದಸ್ಯರ ಪೈಕಿ ಐವರು ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆ. ಈ ಪೈಕಿ ಇಬ್ಬರು ಮಹಿಳೆಯರು.

7ನೇ ವಾರ್ಡ್ ಸದಸ್ಯ ವಿನಾಯಕ ಪೈಲ್ವಾನ್, 20ನೇ ವಾರ್ಡ್‌ನ ಮೀನಾಕ್ಷಿ ಜಗದೀಶ, 31ನೇ ವಾರ್ಡ್‌ನ ಪಾಮೇನಹಳ್ಳಿ ನಾಗರಾಜ, 35ನೇ ವಾರ್ಡ್‌ನ ಸವಿತಾ ಗಣೇಶ ಹುಲ್ಮನಿ ಹಾಗೂ 43ನೇ ವಾರ್ಡ್‌ನ ಶಾಮನೂರು ನಾಗರಾಜ ಕಲ್ಲಳ್ಳಿ ಹೀಗೆ ಐವರು ಸದಸ್ಯರಿದ್ದಾರೆ.

## ನಗರದಲ್ಲಿ ನಾಳೆ ನೃತ್ಯ ಸಮರ್ಪಣಾ-2023

ದಾವಣಗೆರೆ, ಮಾ.3- ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆ ವತಿಯಿಂದ ಈಶ್ವರಮ್ಮ ಟ್ರಸ್ಟ್ ಸಹಕಾರದಲ್ಲಿ ನೃತ್ಯ ಕ್ಷೇತ್ರದ ಮಹಾನ್ ಚೇತನ ದಿ॥ ರುಕ್ಮಿಣಿದೇವಿ ಅರುಂಡೇಲ್ ಸಂಸ್ಮರಣಾರ್ಥ ನೃತ್ಯ ಸಮರ್ಪಣಾ-2023 ಭರತನಾಟ್ಯ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 5 ರ ಭಾನುವಾರ ಸಂಜೆ 5.30ಕ್ಕೆ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಭರತನಾಟ್ಯ ವಿದ್ವತ್ ಅಂತಿಮ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ ವಿಶ್ವಂಬರ ಆರ್. ಭಾಗವತ ಹಾಗೂ ಜ್ಯೋತಿ, ಬಿ.ಆರ್. ಅಂಜಲಿ ಅವರಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುವುದು. ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆಯ ವಿದ್ಯಾರ್ಥಿಗಳಿಂದ ನೃತ್ಯ ಕಾರ್ಯಕ್ರಮ ನಡೆಯಲಿದೆ.

## ನಗರದಲ್ಲಿ ನಾಳೆ ಆರೋಗ್ಯ ತಪಾಸಣಾ ಶಿಬಿರ

ದಾವಣಗೆರೆ, ಮಾ.3- ಬ್ರಾಹ್ಮಣ ಸಮಾಜ ಸೇವಾ ಸಂಘ, ಶ್ರೀ ಶಂಕರ ಸೇವಾ ಸಂಘ ಹಾಗೂ ಸಿಟಿ ಸೆಂಟ್ರಲ್ ಹಾಸ್ಪಿಟಲ್ ಇವರ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 5 ರ ಭಾನುವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಗರದ ರಿಂಗ್ ರಸ್ತೆಯ ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಶಂಕರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿಬಿರದಲ್ಲಿ ಆರೋಗ್ಯ ತಪಾಸಣೆ, ರಕ್ತ ಪರೀಕ್ಷೆ, ಹೃದ್ರೋಗ, ಕೀಲು-ಮೂಳೆ ಪರೀಕ್ಷೆ, ದಂತ ತಪಾಸಣೆ, ನೇತ್ರ ಪರೀಕ್ಷೆ, ಪ್ರಸೂತಿ ಮತ್ತು ಸ್ತ್ರೀ ರೋಗ ಪರೀಕ್ಷೆ, ಶಿಶು ಮತ್ತು ಮಕ್ಕಳ ತಪಾಸಣೆ, ಮೂತ್ರ ರೋಗ ಪರೀಕ್ಷೆ ಮಾಡಿ ತಜ್ಞರಿಂದ ಸೂಕ್ತ ಚಿಕಿತ್ಸೆ ಮತ್ತು ಸಲಹೆ ನೀಡಲಾಗುವುದು. ರಕ್ತ ಪರೀಕ್ಷೆಗೆ ಬರುವವರು ಬೆಳಿಗ್ಗೆ 8 ಗಂಟೆಯೊಳಗೆ ಬರುವಂತೆ ಬ್ರಾಹ್ಮಣ ಸಂಘದ ಅಧ್ಯಕ್ಷ ಡಾ. ಎಂ.ಸಿ. ಶಶಿಕಾಂತ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿಶ್ವಕರ್ಮ ಪರಿಷತ್‌ನಿಂದ ಜನಜಾಗೃತಿ ಸಮ್ಮೇಳನ

ದಾವಣಗೆರೆ, ಮಾ.3- ಅಖಿಲ ಭಾರತ ವಿಶ್ವಕರ್ಮ ಪರಿಷತ್ ದಾವಣಗೆರೆ ಜಿಲ್ಲಾ ಘಟಕ, ಲಯನ್ಸ್ ರಕ್ತ ನಿಧಿ ಕೇಂದ್ರ ಸಹಯೋಗದಲ್ಲಿ ನಾಳೆ ದಿನಾಂಕ 4ರ ಶನಿವಾರ ಗುರುವಂದನಾ ಕಾರ್ಯಕ್ರಮ, ಜನಜಾಗೃತಿ ಸಮ್ಮೇಳನ ಹಾಗೂ ರಕ್ತದಾನ ಮತ್ತು ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳ ಲಾಗಿದೆ ಎಂದು ಅಖಿಲ ಭಾರತ ವಿಶ್ವಕರ್ಮ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಸತೀಶ್ ಕುಮಾರ್ ಹೆಚ್.ವಿ. ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆಯಲ್ಲಿನ ಶ್ರೀ ಸಾಯಿ ಬಾಬಾ ಸಭಾಭವನದಲ್ಲಿ ನಾಳೆ ಶನಿವಾರ ಬೆಳಿಗ್ಗೆ 11 ರಿಂದ ಕಾರ್ಯಕ್ರಮ ನಡೆಯಲಿದೆ ಎಂದರು.

ಅರೆಮಾದನಹಳ್ಳಿ ವಿಶ್ವಬ್ರಾಹ್ಮಣ ಸಂಸ್ಥಾನ ಮಠದ ವಿಶ್ವಕರ್ಮ ಜಗದ್ಗುರು ಶ್ರೀ ಸುಜ್ಞಾನ ಪ್ರಭು ಪೀಠದ ಶ್ರೀ ಅನಂತ ವಿಭೂಷಿತ ಶಿವಸುಜ್ಞಾನತೀರ್ಥ ಸ್ವಾಮೀಜಿ, ಸಿಂಧಗಿ ಮೂರುಝಾವರ ಮಠದ ಶ್ರೀ ರಾಮಚಂದ್ರ ಮಹಾಸ್ವಾಮೀಜಿ, ಜಗದ್ಗುರು ವಿಶ್ವಕರ್ಮ ಮಹಾಸಂಸ್ಥಾನ ಸಾವಿತ್ರೀಪೀಠದ ಶ್ರೀ ಶಂಕರಾತ್ಮನಂದ ಸರಸ್ವತೀ ಮಾಹಾಸ್ವಾಮೀಜಿ, ಶ್ರೀ ನವಶಕ್ತಿ ಮಹಾಕಾಳಿಪೀಠದ ಶ್ರೀ ಶಯವೋಗಿ ಶ್ರೀನಿವಾಸ ಆಚಾರ್ಯ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಎಸ್.ಎ. ರವೀಂದ್ರನಾಥ್ ವಿಶ್ವಕರ್ಮ ಪುಷ್ಪನಮನ ಸಲ್ಲಿಸಲಿದ್ದಾರೆ. ಹಂಪಿ ವಿವಿ ಪ್ರೊ. ಡಾ.ವೀರೇಶ್ ಬಡಿಗೇರ್ ಉಪನ್ಯಾಸ ನೀಡಲಿದ್ದಾರೆ.

ಸಭಾ ಕಾರ್ಯಕ್ರಮಕ್ಕೂ ಮುನ್ನ ನಗರದ ಶ್ರೀ ಕಾಳಿದಾಸ ವೃತ್ತದಿಂದ ಶ್ರೀ ಸಾಯಿಬಾಬಾ ಸಭಾಭವನದವರೆಗೆ ಶ್ರೀ ವಿಶ್ವಕರ್ಮ ಭಾವಚಿತ್ರದೊಂದಗೆ ಶ್ರೀಗಳ ಪಾದಯಾತ್ರೆ, ಬೃಹತ್ ಮೆರವಣಿಗೆ ನಡೆಯಲಿದೆ. ಆರ್.ಎಸ್. ಶೇಖರಪ್ಪ, ದೂಡಾ ಅಧ್ಯಕ್ಷ ಪ್ರಕಾಶ್, ನಗರಸಭಾ ಮಾಜಿ ಅಧ್ಯಕ್ಷ ನಾಗಭೂಷಣ್ ಮೆರವಣಿಗೆ ಉದ್ಘಾಟಿಸಲಿದ್ದಾರೆ

## ಅಮೇಜಾನ್ ಪೇಗೆ ದಂಡ

ಮುಂಬೈ, ಮಾ. 3 – ಪ್ರೀಪೇಯ್ಡ್ ಪಾವತಿ ಹಾಗೂ ಕೆ.ವೈ.ಸಿ. ನಿರ್ದೇಶನಗಳನ್ನು ಪಾಲಿಸದ ಕಾರಣಕ್ಕೆ ಅಮೇಜಾನ್ ಪೇಗೆ ರಿಸರ್ವ್ ಬ್ಯಾಂಕ್ 3.06 ಕೋಟಿ ರೂ.ಗಳ ದಂಡ ವಿಧಿಸಿದೆ. ಕೆ.ವೈ.ಸಿ. ಅಗತ್ಯಗಳಿಗೆ ಸಂಬಂದಿಸಿದಂತೆ ರಿಸರ್ವ್ ಬ್ಯಾಂಕ್ ಮಾರ್ಗ ಸೂಚಿಗಳನ್ನು ಅಮೆಜಾನ್ ಪೇ ಪಾಲಿಸಿಲ್ಲ ಎಂದು ತಿಳಿಸಲಾಗಿದೆ. ಈ ಹಿಂದೆ ಅಮೆಜಾನ್ ಪೇಗೆ ರಿಸರ್ವ್ ಬ್ಯಾಂಕ್ ನೋಟಿಸ್ ಕಳಿಸಿ ಉತ್ತರಿಸುವಂತೆ ತಿಳಿಸಿತ್ತು.

## ಜಿಗಳಿಯಲ್ಲಿ ಇಂದಿನಿಂದ ಜಾತ್ರೆ



ಜಿಗಳಿ ಗ್ರಾಮದ ಆರಾಧ್ಯದೈವ ಶ್ರೀ ರಂಗನಾಥ ಸ್ವಾಮಿಯ ರಥೋತ್ಸ ವವು ನಾಳೆ ಭಾನುವಾರ ತಡರಾತ್ರಿ (ಸೋಮವಾರ ಬೆಳಗಿನ ಜಾವ)ಜರುಗಲಿದೆ. ಇಂದು ರಾತ್ರಿ 8.30ಕ್ಕೆ ಮಹಾರಥಕ್ಕೆ ಕಳಸಧಾರಣೆ ಮಾಡಲಾಗು ವುದು. ನಾಳೆ ಭಾನುವಾರ ಬೆಳಿಗ್ಗೆ 8 ಗಂಟೆಗೆ ಗಜ ಉತ್ಸವ, ಸಂಜೆ 4 ಗಂಟೆಗೆ ಶಸ್ತ್ರ ಕಾರ್ಯಕ್ರಮಗಳು ನಡೆಯಲಿವೆ.




# ಮಾಡಾಳ್ ಪ್ರಕರಣದ ಸೂಕ್ತ ತನಿಖೆಗೆ ಶ್ರೀರಾಮ ಸೇನೆ ಆಗ್ರಹ

ದಾವಣಗೆರೆ, ಮಾ. 3- ಚನ್ನಗಿರಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ಮತ್ತವರ ಕುಟುಂಬದವರು ಕಳೆದ ಐದು ವರ್ಷಗಳಲ್ಲಿ ಕೋಟಿಗಟ್ಟಲೆ ಹಣ ಮತ್ತು ಆಸ್ತಿಯನ್ನು ಲೂಟಿ ಮಾಡಿದ್ದು, ಈಗಾಗಲೇ ಶಾಸಕರ ಪುತ್ರನ ವಿರುದ್ಧ ಲೋಕಾಯುಕ್ತ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಿದ್ದಾರೆ. ಈ ಪ್ರಕರಣ ಕುರಿತು ಮುಖ್ಯಮಂತ್ರಿಗಳು ಸೂಕ್ತ ತನಿಖೆಗೆ ಆದೇಶಿಸಿ, ಕಾನೂನು ಕ್ರಮ ಕೈಗೊಳ್ಳುವಂತೆ ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಕೆ. ಮಣಿಸರ್ಕಾರ್ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

2013 ರಲ್ಲಿ ದಾವಣಗೆರೆ ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ ಅಕ್ರಮವಾಗಿ ನಿವೇಶನ ಪಡೆದವರಲ್ಲಿ ಮಾಡಾಳು ವಿರೂಪಾಕ್ಷಪ್ಪ ಕುಟುಂಬದವರಿದ್ದು, ಈ ಸಂಬಂಧ ಶ್ರೀರಾಮ ಸೇನೆ ವತಿಯಿಂದ ಪ್ರಕರಣ ದಾಖಲಿಸಲಾಗಿದೆ. ಜನತಾ ನ್ಯಾಯಾಲಯದಲ್ಲಿ ವಿಚಾರಣೆ ಇಂದಿಗೂ ನಡೆಯುತ್ತಿದೆ ಎಂದು ಅವರು ಹೇಳಿದರು.

ಮಾಡಾಳು ವಿರೂಪಾಕ್ಷಪ್ಪ ಪುತ್ರರಾದ ಎಂ.ವಿ. ಮಲ್ಲಿಕಾರ್ಜುನ್, ಎಂ.ವಿ. ಪ್ರವೀಣ್ ಕುಮಾರ್, ಸೊಸೆ ಹೆಚ್.ಜಿ. ಸುಧಾರಾಣಿ ಹೆಸರಿನಲ್ಲಿ ನಿವೇಶನ ಪಡೆಯಲಾಗಿದೆ. ಈ ಸಂಬಂಧ ಶ್ರೀರಾಮ ಸೇನೆ ಪ್ರಕರಣ ದಾಖಲಿಸಿದೆ. ಇವರೆಲ್ಲಾ ಜಾಮೀನಿನ ಮೇಲೆ ಹೊರಗಿದ್ದಾರೆ. ಜಾಮೀನು ರದ್ದುಪಡಿಸುವಂತೆ ಬೆಂಗಳೂರಿಗೆ ತೆರಳಿ ಅರ್ಜಿ ಸಲ್ಲಿಸುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೇನೆಯ ಪದಾಧಿಕಾರಿಗಳಾದ ಆಲೂರು ರಾಜಶೇಖರ್, ರಘು, ವಿನಯ್, ಸಾಗರ್, ಶ್ರೀಧರ್, ವಿನೋದ್ ರಾಜ್, ರಾಹುಲ್, ರಮೇಶ್, ರಾಜು, ಅವಿನಾಶ್ ಮತ್ತಿತರರಿದ್ದರು.




ಅಶ್ವಿನಿ ವಿದ್ಯಾಸಂಸ್ಥೆ (ರಿ.)
**ಆಯುರ್ವೇದಿಕ್ ಮೆಡಿಕಲ್ ಕಾಲೇಜ್ & ಪಿ.ಜಿ.ಸೆಂಟರ್ ಆಸ್ಪತ್ರೆ**
ನಂ. 405, ಬಾತಿ ಕೆರೆ ಎದುರು, ಅಶ್ವಿನಿ ನಗರ, ಪಿ.ಬಿ ರೋಡ್, ದಾವಣಗೆರೆ-6.
**ಸ್ವರ್ಣ ಬಿಂದು ಪ್ರಾಶನ**
ದಿನಾಂಕ : 04.03.2023ನೇ ಶನಿವಾರ, ಸಮಯ : ಬೆಳಿಗ್ಗೆ 8.30ರಿಂದ ಮಧ್ಯಾಹ್ನ 1.30ರವರೆಗೆ.
ಸ್ಥಳ : ಬಯಲು ರಂಗಮಂದಿರ, ದೊಡ್ಡಬಾತಿ, ದಾವಣಗೆರೆ.
ಈ ಕೆಳಗಿನ ತೊಂದರೆಗಳಲ್ಲಿ ಸ್ವರ್ಣ ಪ್ರಾಶನದಿಂದ ಉತ್ತಮ ಫಲಿತಾಂಶ ದೊರೆಯುವುದು.
* ಬುದ್ಧಿಮಾಂಧ್ಯತೆ * ನೆನಪಿನ ಶಕ್ತಿ * ಏಕಾಗ್ರತೆಯ ಕೊರತೆ
* ವಾಕ್ ಶ್ರವಣ-ದೃಷ್ಠಿ ದೋಷಗಳು ಹಾಗೂ ರೋಗ ನಿರೋಧಕ ಶಕ್ತಿ.
ಹೀಗೆ ನಿಮ್ಮ ಮಗುವಿನ ಆರೋಗ್ಯ ರಕ್ಷಣೆಗೆ ಹುಟ್ಟಿದ ದಿನದಿಂದ 16 ವಯಸ್ಸಿನ ಎಲ್ಲಾ ಮಕ್ಕಳಿಗೆ ತಿಂಗಳಿಗೊಮ್ಮೆ ಸ್ವರ್ಣ ಪ್ರಾಶನವನ್ನು ಕೊಡಿಸಿ.
ಆಯುರ್ವೇದಿಕ್ ಮೆಡಿಕಲ್ ಕಾಲೇಜು ಆಸ್ಪತ್ರೆಯ ತಜ್ಞ ವೈದ್ಯರಿಂದ ಎಲ್ಲಾ ಖಾಯಿಲೆಗಳಿಗೆ ವಿಶೇಷ ತಪಾಸನೆ ನಡೆಸಲಾಗುವುದು.

## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ **ಶ್ರೀಮತಿ ಪರ್ವಿನ್ ಬಿ. ಕೋಂ ರಜಾಕ್ ಸಾಬ್**, ವಾಸ : ಡೋರ್ ನಂ. 10, ಶಿವನಗರ, ರಿಂಗ್ ರಸ್ತೆ, ದಾವಣಗೆರೆ - 1 ಇವರ ಮಾಹಿತಿಯ ಮೇರೆಗೆ ಸಾರ್ವಜನಿಕ ನೋಟಿಸ್ ಏನೆಂದರೆ :-

**ದಾವಣಗೆರೆ ಸಿಟಿ, ಶಿವನಗರದ ಡೋರ್ ನಂ. 52ರಲ್ಲಿ ವಾಸವಾಗಿರುವ ಶ್ರೀ ಖಾಸಿಂ ಸಾಬ್ ಬಿನ್ ನೂರ್‌ಸಾಬ್**, (ಆಧಾರ್ ನಂಬರ್ 4653 4518 7953) ಆದ ಇವರು ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತನ್ನು ನಮ್ಮ ಕಕ್ಷಿದಾರರಿಗೆ ಮಾರ್ಕೆಟ್ ಬೆಲೆಗೆ ಸರಿಯಾಗಿ ಒಟ್ಟು ರೂ. 4,50,000/-ಗಳಿಗೆ ಕ್ರಯಕ್ಕೆ ಕೊಡಲು ಒಪ್ಪಿಕೊಂಡು ಕ್ರಯದ ನಿಷ್ಕರ್ಷೆಯಾದ ಬಗ್ಗೆ ಕ್ರಯದ ಬಾಬ್ತು ಮುಂಗಡ ಹಣ ರೂ. 1,00,000/- (ಒಂದು ಲಕ್ಷ)ಗಳನ್ನು ಪಡೆದು ಸಾಕ್ಷಿಗಳ ಸಮಕ್ಷಮ ದಿನಾಂಕ : 14.06.2021 ರಂದು ಕ್ರಯ ಕರಾರು ಪತ್ರವನ್ನು ಬರೆದು ಕೊಟ್ಟಿರುತ್ತಾರೆ ಮತ್ತು ಷೆಡ್ಯೂಲ್ ಸ್ವತ್ತಿನ ನೋಂದಣಿ ಮಾಡಿಸಿಕೊಡುವ ಕಾಲಕ್ಕೆ ಅಗತ್ಯವಿರುವ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಒದಗಿಸಿ ಕ್ರಯದ ಬಾಕಿ ಹಣವನ್ನು ಪಡೆದು ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರ ಹೆಸರಿಗೆ ನೋಂದಣಿ ಮಾಡಿಕೊಡುವುದಾಗಿ ಒಪ್ಪಿ ಕರಾರು ಪತ್ರವನ್ನು ಮಾಡಿಕೊಟ್ಟಿದ್ದು, ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸ್ವಾಧೀನ ಹೊಂದಿ ಅನುಭವದಲ್ಲಿರುತ್ತಾರೆ. ಆದರೆ, ಇತ್ತೀಚೆಗೆ ಷೆಡ್ಯೂಲ್ ಸ್ವತ್ತಿನ ಮೇಲೆ ಹೆಚ್ಚಿನ ಹಣ ಪಡೆಯಲು ಮತ್ತು ನಮ್ಮ ಕಕ್ಷಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಖಾಸಿಂಸಾಬ್ ಬಿನ್ ನೂರ್‌ಸಾಬ್ ಹಾಗೂ ಅವರ ಸಹೋದರರು ಸೇರಿಕೊಂಡು ಷೆಡ್ಯೂಲ್ ಸ್ವತ್ತನ್ನು ಬೇರೆಯವರಿಗೆ ಪರಭಾರೆ ಮಾಡುವ ಪ್ರಯತ್ನದಲ್ಲಿದ್ದಾರೆಂದು ನಮ್ಮ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ.

ಕಾರಣ, ಈ ನೋಟಿಸ್ ಷೆಡ್ಯೂಲ್ ಸ್ವತ್ತಿನ ಬಗ್ಗೆ ಮೇಲ್ಕಂಡ ಖಾಸಿಂಸಾಬ್ ಬಿನ್ ನೂರ್‌ಸಾಬ್ ಹಾಗೂ ಅವರ ವಾರಸುದಾರರಿಂದ ಯಾವುದೇ ರೀತಿ ವ್ಯವಹಾರ (ಕ್ರಯ, ಕರಾರು, ಅಡಮಾನ, ಇತ್ಯಾದಿ) ಮಾಡಬಾರದೆಂದು ಈ ಸಾರ್ವಜನಿಕ ನೋಟಿಸ್ ನೀಡಲಾಗಿದೆ. ಒಂದು ವೇಳೆ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿನ ಬಗ್ಗೆ ಮೇಲ್ಕಂಡವರಿಂದ ಯಾವುದೇ ರೀತಿ ವ್ಯವಹರಿಸಿದಲ್ಲಿ ಸದರಿ ವ್ಯವಹಾರವು ನಮ್ಮ ಕಕ್ಷಿದಾರರಿಗೆ ಯಾವುದೇ ರೀತಿಯಲ್ಲಿ ಬಂಧನಕಾರಿಯಾಗಿರುವುದಿಲ್ಲ. ಮುಂದೆ ಸಂಭವಿಸುವ ಪರಿಣಾಮಕ್ಕೆ ಮತ್ತು ಕೋರ್ಟ್ ಖರ್ಚುವೆಚ್ಚಗಳಿಗೆ ತಾವೇ ಹೊಣೆಗಾರರು.

**ಷೆಡ್ಯೂಲ್ :** ಹರಪನಹಳ್ಳಿ ತಾಲ್ಲೂಕು, ಅರಸೀಕೆರೆ ಹೋಬಳಿ, ಚಟ್ನಿಹಳ್ಳಿ ಗ್ರಾಮದ ರಿ.ಸರ್ವೆ ನಂ. 502/5 ರ ಪೈಕಿ 1 ಎಕರೆ, 86 ಸೆಂಟ್ಸ್ ವಿಸ್ತೀರ್ಣವುಳ್ಳ ಖುಷ್ಕಿ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ - ದಾವಲ್‌ಸಾಬ್ ಇವರ ಜಮೀನು, ಪಶ್ಚಿಮಕ್ಕೆ - ಇದೇ ಸರ್ವೆ ನಂಬರ್ ಪೈಕಿ ಉಳಿದ ಜಮೀನು, ಉತ್ತರಕ್ಕೆ - ಪೀರ್‌ಸಾಬ್ ಇವರ ಜಮೀನು, ದಕ್ಷಿಣಕ್ಕೆ - ದಾರಿ.

ಕಕ್ಷಿದಾರರ ಸಹಿ/- **ಪರ್ವಿನ್** ಸಹಿ/- **ಎಸ್. ನಾಗರಾಜ**, ವಕೀಲರು

# ಭಾರತದಲ್ಲಿ ಮೊದಲ ವಿದೇಶಿ ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಅನುಮತಿ

ಅಹಮದಾಬಾದ್, ಮಾ. 3 – ಆಸ್ಟ್ರೇಲಿಯಾದ ಡೀಕಿನ್ ವಿಶ್ವವಿದ್ಯಾಲಯವು ಗುಜರಾತ್‌ನ ಗಿಫ್ಟ್ ಸಿಟಿಯಲ್ಲಿ ಕ್ಯಾಂಪಸ್ ತೆರೆಯಲು ಅನುಮತಿ ನೀಡಲಾಗಿದೆ. ಇದರೊಂದಿಗೆ ಭಾರತದಲ್ಲಿ ಕ್ಯಾಂಪಸ್ ತೆರೆಯಲಿರುವ ಮೊದಲ ವಿದೇಶಿ ವಿಶ್ವವಿದ್ಯಾಲಯ ಡೀಕಿನ್ ಆಗಲಿದೆ.

ಡೀಕಿನ್ ವಿಶ್ವವಿದ್ಯಾನಿಲಯ ಭಾರತದಲ್ಲಿ ಕ್ಯಾಂಪಸ್ ತೆರೆಯಲು ಅನುಮತಿ ನೀಡಿದ್ದೇವೆ ಎಂದು ಅಂತರರಾಷ್ಟ್ರೀಯ ಹಣಕಾಸು ಸೇವೆಗಳ ಕೇಂದ್ರ ಪ್ರಾಧಿಕಾರ (ಐ.ಎಫ್.ಎಸ್.ಸಿ.ಎ.) ಅಧ್ಯಕ್ಷ ಇಂಜೆಟಿ ಶ್ರೀನಿವಾಸ್ ತಿಳಿಸಿದ್ದಾರೆ.

ಭಾರತದಲ್ಲಿ ಅಂತರರಾಷ್ಟ್ರೀಯ ಹಣಕಾಸು ಸೇವೆ ಹಾಗೂ ಸಂಸ್ಥೆಗಳ ನಿಯಂತ್ರಣಕ್ಕಾಗಿ ಐ.ಎಫ್.ಎಸ್.ಸಿ.ಎ. ಸ್ಥಾಪಿಸಲಾಗಿದೆ. ಇನ್ನಷ್ಟು ವಿದೇಶಿ ವಿಶ್ವವಿದ್ಯಾನಿಲಯಗಳು ಭಾರತದಲ್ಲಿ ಕ್ಯಾಂಪಸ್ ತೆರೆಯಲಿವೆ.

ನಾವು ಆಸ್ಟ್ರೇಲಿಯಾ ಹಾಗೂ ಬ್ರಿಟನ್ ವಿಶ್ವವಿದ್ಯಾನಿಲಯಗಳ ಜೊತೆ ಮಾತುಕತೆ ನಡೆಸಿದ್ದೇವೆ ಎಂದು ಶ್ರೀನಿವಾಸ್ ಹೇಳಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ಇಲ್ಲ

ಸಿದ್ದೇಶ್ವರ ನಗರ, ಶಿವಾ ಕಾಲೇಜ್, ಅಲ್ತಾಫ್ ನಗರ, ಗೌಸಿಯಾ ಫ್ಲಾಟ್, ಮಂಡಕ್ಕಿ ಬಟ್ಟಿ ಮತ್ತು ಕೋಟೆ ಸ್ಥಳಗಳಲ್ಲಿ ಮತ್ತು ಗ್ರಾಮೀಣ ಪ್ರದೇಶದ ಎಫ್-02 ಕುದರಿಹಾಳ ಕುಡಿಯುವ ನೀರಿನ ಫೀಡರಿಗೆ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.


**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**


★ ಕನಕ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್, ಅಣಬೇರು.
★ ಜ್ಞಾನದೀಕ್ಷಾ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್, ಬನ್ನಿಕೋಡು.
★ B.Sc B.Ed & (PCM CBZ)-4
★ B.A B.Ed (English Social)-4

ಸಂದರ್ಶನ : ದಿ.05.03.2023 ಭಾನುವಾರ ಬೆಳಿಗ್ಗೆ 11ಕ್ಕೆ.

**ಕನಕ ಕರೆಸ್ಪಾಂಡೆನ್ಸ್ ಕಾಲೇಜ್**

ಮಾಹಿತಿಗಾಗಿ:
ಶ್ರೀ ಅಣಬೇರು ಶಿವಮೂರ್ತಿ, ಕಾರ್ಯದರ್ಶಿಗಳು.
Phone : 9886678178





**ಹೃದಯಪೂರ್ವಕ ಅಭಿನಂದನೆಗಳು**

ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಪ್ರತಿಷ್ಠಿತ
**'ಗೌರವ ಡಾಕ್ಟರೇಟ್'**
ಪದವಿ ಪುರಸ್ಕಾರಕ್ಕೆ ಭಾಜನರಾಗಿರುವ
ಅಖಿಲ ಭಾರತ ವೀರಶೈವ - ಲಿಂಗಾಯಿತ ಮಹಾಸಭಾದ
ರಾಷ್ಟ್ರೀಯ ಉಪಾಧ್ಯಕ್ಷರೂ, ಹೆಸರಾಂತ
ಲೆಕ್ಕ ಪರಿಶೋಧಕರೂ, ಕೈಗಾರಿಕೋದ್ಯಮಿಗಳೂ ಆದ
**ಶ್ರೀ ಅಥಣಿ ಎಸ್. ವೀರಣ್ಣ**
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.
ಶ್ರೀಯುತರಿಗೆ ಆಯುರಾರೋಗ್ಯ,
ಉನ್ನತ ಸ್ಥಾನ ಮಾನಗಳು ಲಭಿಸಲಿ
ಎಂದು ಭಗವಂತನಲ್ಲಿ ಪ್ರಾರ್ಥನೆ.

ಲಿಂ॥ ಶ್ರೀಮತಿ ಸುನಂದಮ್ಮ ಹಾಲಪ್ಪ
ಮತ್ತು ಲಿಂ॥ ಎಂ. ಹಾಲಪ್ಪನವರು,
ಖಜಾಂಚಿಗಳು, ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘ
ಅಧ್ಯಕ್ಷರು, ಶ್ರೀ ಬಕ್ಕೇಶ್ವರ ರಥೋತ್ಸವ ಸಮಿತಿ
ಇವರ ಮಗನಾದ
**ಎಂ. ಹೆಚ್. ಶಶಿಧರ, ದಾವಣಗೆರೆ.**



ಲಿಂ॥ ಎಂ. ಹಾಲಪ್ಪ ಲಿಂ॥ ಶ್ರೀಮತಿ ಸುನಂದಮ್ಮ



**ಶ್ರೀ ರಾಘವೇಂದ್ರ ದಂತ ಚಿಕಿತ್ಸಾಲಯ**

**ಡಾ॥ ಪ್ರಸನ್ನ ಕುಮಾರ್ ಜೆ.ಎನ್ MDS**
ಸೀನಿಯರ್ ಡೆಂಟಲ್ ಸರ್ಜನ್ ಮತ್ತು ಕಾಸ್ಮೆಟಿಕ್ ಹಾಗೂ ರೂಟ್ ಕೆನಾಲ್ ಸ್ಪೆಷಲಿಸ್ಟ್



ಲಭ್ಯವಿರುವ ಚಿಕಿತ್ಸೆಗಳು :-
ರೂಟ್ ಕೆನಾಲ್ ಚಿಕಿತ್ಸೆ
ಕಾಸ್ಮೆಟಿಕ್ ಸರ್ಜರಿ
ಲೇಸರ್ ಚಿಕಿತ್ಸೆ
ಇಂಪ್ಲಾಂಟ್ ಸರ್ಜರಿ
ಮ್ಯಾಕ್ಸಿಲೋಫೇಶಿಯಲ್ ಸರ್ಜರಿ
ಆರ್ಥೋಡಾಂಟಿಕ್ ( ಹುಬ್ಬು ಹಲ್ಲು ಚಿಕಿತ್ಸೆ )
ಥರ್ಡ್‌ಮೋಲಾರ್ ಸರ್ಜರಿ

ಕಳೆದ 22 ವರ್ಷಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಾ
ಇದೀಗ ಅತ್ಯಾದುನಿಕ ಹೈಟೆಕ್ ತಂತ್ರಜ್ಞಾನದೊಂದಿಗೆ
ವಿನೂತನವಾಗಿ ನಿಮ್ಮ ನಗರದಲ್ಲಿ
ದಿನಾಂಕ : 05-03-2023 ರ ಭಾನುವಾರದಿಂದ
**ಪ್ರಾರಂಭಗೊಳ್ಳಲಿದೆ**
ಸಂಪರ್ಕಿಸಿ :- 9448668006
9743440144





ಸ್ಥಳ : ಹೆಚ್.ವಿ. ಕಾಂಪ್ಲೆಕ್ಸ್, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಕಛೇರಿ ಪಕ್ಕ, ಮರೇನಹಳ್ಳಿ ರಸ್ತೆ, ಜಗಳೂರು.



**Don't Miss... Last Chance For Davanagere Citizens**
**New Stock Just Arrived Sale Last 2 Days**
**BRANDED READYMADE GARMENTS BIGGEST EVER DISCOUNT SALE**
Like Ladies, Gents & Kids and Bed Sheets
"For Direct Retail Customers"
**Up to 80% Heavy Disscount**

ಸೂಚನೆ: ಬ್ರಾಡೆಂಡ್ ರೆಡಿಮೇಡ್ ಉಡುಪುಗಳ ಬೃಹತ್ ಸ್ಟಾಕ್‌ನಿಂದಾಗಿ ಗೋದಾಮಿನಲ್ಲಿ ಸಂಗ್ರಹವಾಯಿತು. ಇದು ಕಂಪನಿಯು ಆರ್ಥಿಕ ಬಿಕ್ಕಟ್ಟಿನ ಕಡೆಗೆ ಎದುರಿಸಿತು, ಆದ್ದರಿಂದ ಕಂಪನಿಯು ದಾವಣಗೆರೆ ಗ್ರಾಹಕರಿಗೆ ಭಾರಿ ರಿಯಾಯಿತಿ ನೀಡಲು ನಿರ್ಧರಿಸಿದೆ 3 ಕೋಟಿ ರೂಪಾಯಿಗಳ ರೆಡಿಮೇಡ್ ಉಡುಪುಗಳನ್ನು ಈಗ ಕೇವಲ 60 ಲಕ್ಷಕ್ಕೆ ನಗದು ರೂಪದಲ್ಲಿ ಮಾರಾಟ ಮಾಡಲು ನಿರ್ಧರಿಸಿದೆ ಮತ್ತು 2 ದಿನಗಳಲ್ಲಿ ಬಾಕಿ ಸರಕನ್ನು ಮಾರಾಟ ಮಾಡಲಾಗುವುದು.

**ಸದರ್ನ್ ಸ್ಟಾರ್, ದಾವಣಗೆರೆ**

Sincere Request : To the customers to maintain silence during shopping

10,000 ವಿವಿಧ ಪ್ರಕಾರದ ಜೇಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್,
ಟೀ ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಇತರೆ
**Just Rs.150/- to 350/-**

ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್: MRP: 1499/- to 4999/-
INDIAN TERRAIN, INDIGO NATION, DANIEL HECHTER, BARE, IZOD, HIGHLANDER, SCULLERS
Choose 30,000 Verities Jeans Pant, Cotton Pant, Formal, Shirts, T-Shirts, Lower Etc.
**Just Rs. 499/- to 999/-**

ಬ್ರಾಂಡೆಡ್ ಲೇಡಿಸ್ ಕುರ್ತಿಸ್ ಮೇಳಾ, ಕುರ್ತಿ ಮತ್ತು ಪಾಶ್ಚಿಮಾತ್ಯ ಬಟ್ಟೆಗಳು MRP : Up to 3999/-
BIBA, JACK&JONES, VERO MODA, abof, ONLY
Choose 20,000 Plazo, Pant, Kurti & Western Outfits ectc
**Just Rs. 200/-, 400/-, 600/-** *This offer till stock lasts *Condition apply

BIG Offer Rajasthani Royal Printed Bedsheets, Pillow cover, Sofa cover etc

Ladies & Gents Under Garments Just Rs. 60/- to 125/-

ಲಾಸ್ಟ್ 2 ದಿನಗಳು ಮಾತ್ರ 4 ಶನಿ & 5 ಭಾನುವಾರ ಮಾರ್ಚ್ 2023 Time : 10am to 10pm

ಸ್ಥಳ: **SOUTHERN STAR ಸದರ್ನ್ ಸ್ಟಾರ್**
3993/23, Shamanur Road,
S.S. Layout, A Block, Beside S S Mall
Davanagere, Karnataka-577004
3993/23, ಶ್ಯಾಮನೂರ ರಸ್ತೆ, ಎಸ್ಎಸ್ ಲೇಔಟ್, ಎ.ಬ್ಲಾಕ್, ಎಸ್.ಎಸ್.ಮಾಲ್ ಪಕ್ಕದಲ್ಲಿ, ದಾವಣಗೆರೆ-577004

FREE PARKING ENTRANCE
All Major Debit / Credit Cards.
Google Pay, PhonePe Accepted



॥ ನಮಃ ಸದ್ಯೋಜಾತ ಗುರುವರ್ಯಃ ॥



ಅಖಿಲ ಭಾರತ ಶಿವಾಚಾರ್ಯ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷರೂ ಹಾಗೂ
ದಾವಣಗೆರೆ ಹಿರೇಮಠದ ಸ್ಥಿರಪಟ್ಟಾಧ್ಯಕ್ಷರೂ ಆದ
**ಶ್ರೀ ಷ.ಬ್ರ. ಡಾ. ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಇವರ**
**15ನೇ ಸಂಸ್ಮರಣೋತ್ಸವದ ಆಹ್ವಾನ ಪತ್ರಿಕೆ**



ದಿನಾಂಕ 04-03-2023, ಶನಿವಾರ ಸಂಜೆ 6-00 ಗಂಟೆಗೆ

ಸಾನ್ನಿಧ್ಯ :
ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು
**ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು,**
ಉಜ್ಜಯಿನಿ ಮಹಾಪೀಠ.

ಅಧ್ಯಕ್ಷತೆ :
**ಡಾ. ಶಾಮನೂರು ಶಿವಶಂಕರಪ್ಪ,** ಶಾಸಕರು ಹಾಗೂ ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ.

ಉಪನ್ಯಾಸ :
ವಿಷಯ : ಸಮಾಜಕ್ಕೆ ಸ್ವಾಮೀಜಿಗಳ ಕೊಡುಗೆ
**ಶ್ರೀ ದಾರುಕೇಶ್ ಬಿ.ಎಂ.**
ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ,
ದಾವಣಗೆರೆ ದಕ್ಷಿಣ ವಲಯ

ಮುಖ್ಯ ಅತಿಥಿಗಳು :
**ಡಾ. ಅಥಣಿ ಎಸ್. ವೀರಣ್ಣ**
ಖ್ಯಾತ ಲೆಕ್ಕ ಪರಿಶೋಧಕರು, ಕೈಗಾರಿಕೋದ್ಯಮಿಗಳು
ಹಾಗೂ ಅಧ್ಯಕ್ಷರು, ಬಾಪೂಜಿ ಎಂ.ಬಿ.ಎ. ಕಾಲೇಜ್,
ದಾವಣಗೆರೆ.

**ಶ್ರೀ ಬಿ. ಸಿ. ಉಮಾಪತಿ**
ಖ್ಯಾತ ವರ್ತಕರು ಹಾಗೂ
ಸದಸ್ಯರು, ಆಡಳಿತ ಮಂಡಳಿ
ದಾವಣಗೆರೆ.

ಪ್ರಾರ್ಥನೆ : **ಶ್ರೀಮತಿ ವಿಜಯ ಹಿರೇಮಠ,** ದಾವಣಗೆರೆ ಹಾಗೂ **ಶ್ರೀ ಗುರು ಪಂಚಾಕ್ಷರ ಸಂಗೀತ ವಿದ್ಯಾಲಯದ ವಿದ್ಯಾರ್ಥಿ ವೃಂದದಿಂದ** ದಾವಣಗೆರೆ
ಸಂಗೀತ : **ಶ್ರೀಮತಿ ಡಿ.ಆರ್. ಕೃಷ್ಣವೇಣಿ,** ವಾಸವಿ ಯುವತಿಯರ ಭಜನಾ ಮಂಡಳಿ, ದಾವಣಗೆರೆ.

**ಕಾರ್ಯಕ್ರಮದ ನಂತರ ಪ್ರಸಾದ ವ್ಯವಸ್ಥೆ ಇರುತ್ತದೆ**


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte